ಕರ್ನಾಟಕ ಲಲಿತಕಲಾ ಅಕಾಡೆಮಿ

ಜನಪ್ರಿಯ ದೇಶಿ ಕಲಾಮಾಲೆ

ಬೆಳದಿಂಗಳ ಚಿತ್ರಕಲೆ

● ಆನಂದ ಕೆ. ಪೂಜಾರ



ಬೆಳದಿಂಗಳ ಚಿತ್ರಕಲೆ

ಪ್ರಧಾನ ಸಂಪಾದಕರು
ಪೀಟರ್ ಎ. ಲೂಯಿಸ್

ಲೇಖಕರು
ಆನಂದ ಕೆ. ಪೂಜಾರ

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು ೫೬೦೦೦೨

BELADINGALA CHITRAKALE
By : **Ananda K. Poojar**
Published by
B.T. Munirajayya, Registrar
Karnataka Lalithakala Academy
Kannada Bhavana, J.C.Road
BANGALORE-560002
First Impression : 2004
Pages : XII + 26 Price Rs : 40-00
ಬೆಲೆ ರೂ. : ೪೦-೦೦
ಪ್ರಥಮ ಮುದ್ರಣ : ೨೦೦೪
© ಲೇಖಕರದು
ಈ ಪುಸ್ತಕದಲ್ಲಿರುವ ಅಭಿಪ್ರಾಯಗಳು
ಆಯಾ ಲೇಖಕರಿಗೆ ಸಂಬಂಧಿಸಿದ್ದು
ಪ್ರಧಾನ ಸಂಪಾದಕರು
ಶ್ರೀ ಪೀಟರ್ ಎ. ಲೂಯಿಸ್
ಸಂಪಾದಕರು
ಡಾ.ಎಸ್.ಸಿ.ಪಾಟೀಲ
ಪ್ರಕಟಣಾ ಸಮಿತಿ ಸದಸ್ಯರು
ಶ್ರೀ ಸುರೇಶ ಡಿ.ಹಾಲಬಾವಿ
ಡಾ. ಪೂರ್ಣಿಮಾ ಪಾಟೀಲ
ಶ್ರೀ ಪಿ.ಎಸ್.ಕಡೇಮನಿ
ಶ್ರೀ ಬಿ.ಎಸ್.ದೇಸಾಯಿ
ಶ್ರೀ ದಿಲೀಪಕುಮಾರ ಕಾಳೆ
ಪ್ರಕಾಶಕರು
ಶ್ರೀ ಬಿ.ಟಿ.ಮುನಿರಾಜಯ್ಯ, ರಿಜಿಸ್ಟ್ರಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
ಸಮನ್ವಯಕಾರ : ಶ್ರೀ ಪ.ಸ.ಕುಮಾರ
ಮುಖಪುಟ : ಶ್ರೀ ಸುಧಾಕರ ದರ್ಬೆ
ಅಕ್ಷರ ಜೋಡಣೆ : ಯಾಜಿ ಗ್ರಾಫಿಕ್ಸ್, ಹೊಸಪೇಟೆ
ಮುದ್ರಣ : ಶ್ರೀ ಮಾರುತಿ ಪ್ರಿಂಟರ್ಸ್, ಸುಧಾಮನಗರ, ಬೆಂಗಳೂರು-೨೭

ಅಧ್ಯಕ್ಷರ ಮಾತು

ಆತ್ಮೀಯರೆ,

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ, ರೂಪಿಸಿ ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡುವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳು ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್' 'ನಿಮ್ಮೊಂದಿಗೆ ನಾವು' 'ಮನೆಗೊಂದು ಕಲಾಕೃತಿ', 'ಜನಪದ ಶೃತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

ಯಂಗ್ ಸ್ಟ್ರೋಕ್ಸ್: ಕರ್ನಾಟಕದ ನಾಲ್ಕು ವಿಭಾಗಗಳಿಂದ ಆಯ್ದ ಪ್ರತಿಭಾವಂತ ಯುವಕಲಾವಿದರ ಕಲಾಪ್ರದರ್ಶನವನ್ನು ಬೆಂಗಳೂರು, ಮುಂಬೈ ಮತ್ತು ನವದೆಹಲಿಯಲ್ಲಿ ಪ್ರದರ್ಶಿಸಿದ್ದೇವೆ. ಸುಂದರ ಕೈಪಿಡಿಯನ್ನು ಮುದ್ರಿಸಿದ್ದೇವೆ.

ಮನೆಗೊಂದು ಕಲಾಕೃತಿ : ಮಧ್ಯಮ ವರ್ಗದ ಜನರ ಮನೆಯಲ್ಲಿ ನಾಡಿನ ಕಲಾವಿದರ ಕೃತಿಗಳು ರಾರಾಜಿಸಬೇಕೆಂಬ ಉದ್ದೇಶದಿಂದ ಕಡಿಮೆ ಬೆಲೆಯಲ್ಲಿ ಕಲಾಕೃತಿಗಳನ್ನು ಮಾರಾಟ ಮಾಡಿದೆವು. ಜನರ ಉತ್ಸಾಹ ಹಾಗೂ ಪ್ರೋತ್ಸಾಹ ನಮ್ಮನ್ನು ನಿಬ್ಬೆರಗಾಗಿಸಿತು. ಐದುನೂರಕ್ಕೂ ಹೆಚ್ಚು ಕಲಾಕೃತಿಗಳು ಮಧ್ಯಮ ವರ್ಗದ ಮನೆಗಳನ್ನು ಅಲಂಕರಿಸಿದರೆ, ಅಕಾಡೆಮಿ ಬೊಕ್ಕಸಕ್ಕೆ ಲಕ್ಷಕ್ಕೂ ಹೆಚ್ಚು ಆದಾಯ ಬಂತು.

ನಿಮ್ಮೊಂದಿಗೆ ನಾವು : ಕರ್ನಾಟಕದ ಎಲ್ಲ ಕಡೆಗಳಲ್ಲೂ ಈ ಕಾರ್ಯಕ್ರಮಕ್ಕೆ ನಿರೀಕ್ಷೆಗೆ ಮೀರಿದ ಯಶಸ್ಸು ಲಭಿಸಿದೆ. ಈಗಾಗಲೇ ಎಪ್ಪತ್ತೈದು ಸಾವಿರ ಜನರಿಗೆ ಕಲೆಯ ಕಿರು ಪರಿಚಯವನ್ನು ಮಾಡಿಸಿದೆ.

ಜನಪದ ಶೃತಿ-ಆಧುನಿಕ ಕೃತಿ : ಜಾನಪದದ ಬೇರುಗಳು ಗಟ್ಟಿಯಾಗಿರುವ ಹಳ್ಳಿಯಲ್ಲಿ ಆಧುನಿಕ ಚಿತ್ರಕಲೆಯನ್ನು ಎತ್ತಿನ ಬಂಡಿಗಳ ಮೇಲೆ ಚಿತ್ರಿಸಿ 'ಚಲಿಸುವ ಗ್ಯಾಲರಿ'ಗಳನ್ನು ನಿರ್ಮಿಸಿದ್ದೇವೆ.

ಯುವ ಕಲಾವಿದರಿಗೆ ಫೆಲೋಶಿಪ್ : ಮೂವರು ಯುವ ಪ್ರತಿಭೆಗಳನ್ನು ಆಯ್ಕೆ ಮಾಡಿ ಅವರಿಗೆ ಒಂದು ವರ್ಷದ ಅವಧಿಗೆ ತಿಂಗಳಿಗೆ ರೂ.೩೦೦೦ (ಮೂರು ಸಾವಿರ) ಧನ ಸಹಾಯ ನೀಡಿ ಸ್ವತಂತ್ರವಾಗಿ ಚಿಂತಿಸಿ ಅಭಿವ್ಯಕ್ತಿಸುವ ವಾತಾವರಣವನ್ನು ನಿರ್ಮಿಸಿ ಕೊಟ್ಟಿದ್ದೇವೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಹೊಸದುರ್ಗದ ಹತ್ತಿರವಿರುವ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ.ಎಸ್. ದಂಡಾವತಿಮಠ ಹಾಗೂ ಡಾ.ಎಂ.ವಿ.ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫೆಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡುವ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸುತ್ತಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕೊರೆಯುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಲವು ಹತ್ತು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯು ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಕಲಾವಾರ್ತೆ ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. ಹಾಗೆಯೇ ಅಕಾಡೆಮಿಯ

ಎಲ್ಲ ಸದಸ್ಯರ ತೀರ್ಮಾನದಂತೆ ಹತ್ತು ಜನ ಹಿರಿಯ ಕಲಾವಿದರ ಚಿತ್ರಸಂಪುಟ ಮತ್ತು ಒಂಬತ್ತು ಜನ ಹಿರಿಯ ಕಲಾವಿದರಾದ ಪ್ರೊ.ವ್ಹಿ.ಜಿ.ಅಂದಾನಿ, ಎಸ್.ಕಾಳಪ್ಪ, ಎಚ್.ಎಸ್. ಇನಾಮತಿ, ಕೆ.ಕೇಶವಯ್ಯ, ಪುರುಷೋತ್ತಮ ಕಾರಂತ, ಎಂ.ಆರ್.ಬಾಳೀಕಾಯಿ, ರಘೋತ್ತಮ ಪುಟ್ಟಿ, ವ್ಹಿ.ಟಿ.ಕಾಳೆ ಹಾಗೂ ಸಿ.ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು ಆಯಾ ಲೇಖಕರು ಆ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಸಂಪಾದಿಸಿಕೊಟ್ಟ ಡಾ.ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಅಕಾಡೆಮಿಯ ಇನ್ನೊಂದು ಗ್ರಂಥ 'ಮುಖಗಳೊಂದಿಗೆ ಮುಖಾಮುಖಿ' ಭಾವಚಿತ್ರ ಪರಂಪರೆ ಶೀರ್ಷಿಕೆಯ ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದು ಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ.ಸುಬ್ರಹ್ಮಣ್ಯಂರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲ ನೋಟವನ್ನು ಒಂದೆಡೆಗೆ ಮಾಡಿಕೊಡುವ ಉದ್ದೇಶದಿಂದ **ಕರ್ನಾಟಕ ಚಿತ್ರಕಲಾ ದರ್ಶನ** ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು ಇದನ್ನು ಡಾ.ಎಸ್.ಸಿ.ಪಾಟೀಲ ಅವರು ಸಂಪಾದಿಸಿ ಕೊಡುತ್ತಿದ್ದಾರೆ. ಅದಕ್ಕಾಗಿ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ಪರಿಚಯಿಸುವ ದೃಷ್ಟಿಯಿಂದ ಈ ಕೆಳಗಿನ ಗ್ರಂಥಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ.

೧. ರಂಗೋಲಿ ಚಿತ್ರಕಲೆ

೨. ಶೀಗಿ ಚಿತ್ರಕಲೆ

೩. ಕಸೂತಿ ಚಿತ್ರಕಲೆ

೪. ಹಚ್ಚೆ ಚಿತ್ರಕಲೆ

೫. ಬೆಳದಿಂಗಳ ಚಿತ್ರಕಲೆ

೬. ಚಿತ್ತಾರಗೊಂಬೆ ಚಿತ್ರಕಲೆ

೭. ನಾಗಾರಾಧನೆ ಮತ್ತು ಚಿತ್ರಕಲೆ

೮. ಯಕ್ಷಗಾನ ಮತ್ತು ಚಿತ್ರಕಲೆ

೯. ಬಿದರಿ ಚಿತ್ರಕಲೆ

೧೦. ಭೂತಾರಾಧನೆ ಮತ್ತು ಚಿತ್ರಕಲೆ

ಅಳಿದು ಹೋಗುತ್ತಿರುವ ನಮ್ಮ ಜಾನಪದರ ಈ ಚಿತ್ರಕಲೆಯನ್ನು ಉಳಿಸಿ ಬೆಳೆಸಿ ಕೊಳ್ಳುವ ಮತ್ತು ಜನಸಾಮಾನ್ಯರಿಗೂ ಪರಿಣಿತರಿಗೂ ಸುಲಭ ಬೆಲೆಯಲ್ಲಿ ಕಲೆಯ ಈ ಸಾಹಿತ್ಯವನ್ನು ತಲುಪಿಸುವುದು ನಮ್ಮ ಉದ್ದೇಶವಾಗಿದೆ. ಎಲ್ಲ ವರ್ಗದ ಜನರು ಕಲೆಯನ್ನು ಅರ್ಥೈಸಿಕೊಳ್ಳಬೇಕು ಮತ್ತು ಅದರೊಂದಿಗೆ ತಾವೂ ಬೆರೆತುಕೊಳ್ಳಬೇಕು ಅಂದಾಗ ಮಾತ್ರ ಕಲೆ ಉಳಿಯುತ್ತದೆ ಮತ್ತು ಬೆಳೆಯುತ್ತದೆ. ಇಂತಹ ಕೆಲಸಗಳು ಹಲವಾರು ರೀತಿಯಿಂದ ಆಗಬೇಕಾಗಿದೆ. ಕಲಾ ಪ್ರದರ್ಶನ, ಕಲಾಶಿಬಿರ, ವಿಚಾರ ಸಂಕಿರಣ, ಕಲಾ ಪ್ರಾತ್ಯಕ್ಷಿಕೆ ಇತ್ಯಾದಿ ಯಾಗಿ ಮಾಡುತ್ತ ಹೆಚ್ಚು ಹೆಚ್ಚು ಜನಪ್ರಿಯಗೊಳಿಸುವ ಕೆಲಸಗಳು ನಡೆದಷ್ಟು ಈ ಕ್ಷೇತ್ರ ಬೆಳೆಯುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಜನಪ್ರಿಯ ಕಲಾಮಾಲಿಕೆಯಲ್ಲಿ ಈ ಹೊತ್ತಿಗೆಗಳನ್ನು ಪ್ರಕಟಿಸು ತ್ತಿದ್ದೇವೆ. ನಮ್ಮ ಮನವಿಯನ್ನು ಒಪ್ಪಿ ಈ ಹೊತ್ತಿಗೆಗಳನ್ನು ತಮ್ಮ ಬಿಡುವಿಲ್ಲದ ವೇಳೆಯಲ್ಲಿಯೂ ನಮಗಾಗಿ ಕಷ್ಟಪಟ್ಟು ಬರೆದುಕೊಟ್ಟ ಎಲ್ಲ ಲೇಖಕರಿಗೆ ಮತ್ತು ಈ ಪುಸ್ತಕಗಳ ಯೋಜನೆಯನ್ನು ರೂಪಿಸಿ, ಪರಿಣಿತ ಲೇಖಕರನ್ನು ಹುಡುಕಿ, ಅವರಿಂದ ಬರ ವಣಿಗೆಯನ್ನು ಬರೆಯಿಸಿ ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟವರು ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ.ಎಸ್.ಸಿ.ಪಾಟೀಲ ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ನಿಮ್ಮ ಮುಂದಿಟ್ಟಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫೇಕ್ಸ್ ಸಂಸ್ಥೆಗೆ ವಂದನೆಗಳು. ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ವಿಶೇಷವಾಗಿ ಸಮನ್ವಯಕಾರರಾಗಿ ಈ ಕಾರ್ಯ ಆಗು ಮಾಡಿದ ಸದಸ್ಯ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯ ಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿವರ್ಗ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು. ನಮ್ಮ ಈ ಕಿರುಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಬೆಂಗಳೂರು
೨೦೦೪

ಪೀಟರ್ ಎ. ಲೂಯಿಸ್
ಅಧ್ಯಕ್ಷರು

ಸಂಪಾದಕೀಯ

ಎಲ್ಲ ಅನ್ಯಶಿಸ್ತುಗಳಲ್ಲಿ ಆದಂತೆ ದೃಶ್ಯಕಲೆಯ ಕ್ಷೇತ್ರದಲ್ಲೂ ಹೊಸ ನೀರು ಪಶ್ಚಿಮದಿಂದ ಹರಿದು ಬಂದಿದೆ. ಅದರೊಂದಿಗೆ ನಮ್ಮದೇ ಆದ ದೇಶಿಪರಂಪರೆಯ ತಿಳುವಳಿಕೆಯ ಹಿನ್ನಲೆಯಲ್ಲಿಯೂ ಈ ಕಲೆ ಬೆಳೆದು ಬಂದಿದೆ. ಈ ಎರಡೂ ವಿಭಿನ್ನ ಜ್ಞಾನ ಪರಂಪರೆಯ ತಿಳುವಳಿಕೆಯ ಸಂಪರ್ಕ, ಸಂಸರ್ಗದಲ್ಲಿ ಮತ್ತೊಂದು ಬಗೆಯ ಹೊಸಜ್ಞಾನ ಪ್ರವಾಹ ನಮ್ಮ ಕಲಾಪ್ರಪಂಚದಲ್ಲಿ ಸಂಚಲನೆಗೊಂಡಿದ್ದು ಅದು ನಮ್ಮನ್ನು ದಿಗ್ಭ್ರಮೆಗೊಳಿಸುವಷ್ಟು ಈ ಕ್ಷೇತ್ರವನ್ನು ಆವರಿಸಿಕೊಳ್ಳುತ್ತಿದೆ.

ನಮ್ಮ ತನವನ್ನೆಲ್ಲ ನಾವು ಎಲ್ಲಿ ಕಳೆದುಕೊಳ್ಳುತ್ತೇವೆ ಎಂಬ ಆತಂಕ ಕೊಡ ಕಲಾವಲಯದಲ್ಲಿ ಉಂಟಾಗುತ್ತದೆ. ಜಾಗತೀಕರಣ ನಮ್ಮ ಸ್ಥಳೀಕರಣದ ಕಲಾ ಸಂಸ್ಕೃತಿಯ ಮೇಲೆ ಮೂಡಿಸಿದ ಈ ಪರಿಣಾಮದ ಬಗ್ಗೆ ಗಂಭೀರ ಚಿಂತನೆಗಳು ನಡೆಯಬೇಕಾಗಿವೆ. ಇಂತಹ ಸಂಕ್ರಮಣ ಕಾಲದಲ್ಲಿ ಸಹಜವಾಗಿಯೇ ದೇಶಿಕಲಾ ಚಿಂತನೆಗೆ ಹೆಚ್ಚು ಪ್ರಾಮುಖ್ಯತೆ ಪ್ರಾಪ್ತವಾಗುತ್ತಲಿದೆ.

ಕರ್ನಾಟಕದಲ್ಲಿ ಈಗ ಸ್ಥಾನಿಕ ನೆಲೆಯಲ್ಲಿ ಪ್ರಾದೇಶಿಕ ಹಿನ್ನೆಲೆಯ ದೇಶಿಚಿತ್ರ ಕಲೆಯ ಬಹುವಿನ್ಯಾಸಗಳ ಕಡೆಗೆ ನಾವು ಗಮನಹರಿಸಬೇಕಾಗಿದೆ. ಇಂದು ಶಿಷ್ಟಪರಂಪರೆಯ ಚಿತ್ರಕಲೆಯೇ ಎಂಬ ವಾತಾವರಣ ಉಂಟಾಗಿದೆ. ಆದರೆ ಕಲೆಯ ತಾಯಿ ಬೇರುಗಳು ಜನಪದ ಚಿತ್ರಕಲೆಯಿಂದ ಬಂದವುಗಳು ಎಂಬ ಪ್ರಜ್ಞೆಯನ್ನು ನಾವು ಅರಿಯಬೇಕಾಗಿದೆ. ಈ ಹಿನ್ನಲೆಯಲ್ಲಿ ನಮ್ಮ ಜಾನಪದ ನೆಲೆಯ ಚಿತ್ರಕಲಾ ಸಂಸ್ಕೃತಿಯನ್ನು ನಾವು ಜಾಗತಿಕ ನೆಲೆಯಲ್ಲಿ ಪರಿಚಯಿಸುವ, ಅನ್ವಯಗೊಳಿಸುವ, ಕಾರ್ಯಕ್ರಮಗಳನ್ನು ಅಸ್ತಿತ್ವಕ್ಕೆ ತರಬೇಕಾಗಿದೆ. ಈ ದಿಸೆಯಲ್ಲಿ ಅಕಾಡೆಮಿಯ ಈ ಯೋಜನೆ ಒಂದು ಸಣ್ಣ ಪ್ರಯತ್ನ ಮಾತ್ರ. ಹೆಚ್ಚಿನ ಅಧ್ಯಯನಗಳಿಗೆ ಇದು ನಾಂದಿಯಾಗುತ್ತದೆ ಎಂಬ ವಿಶ್ವಾಸ ನಮ್ಮದಾಗಿದೆ. ಸಾವಿರಾರು ವರ್ಷಗಳ ನಮ್ಮ ಚಿತ್ರಕಲೆಯನ್ನು

ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಅದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿ ಒದಗಿಸಿರುವುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಹೀಗೆ ಜಾನಪದ ನಮ್ಮ ಪ್ರಾಚೀನ ಮಾರ್ಗ ಚಿತ್ರಕಲೆಯ ಒಂದು ಅವಿಭಾಜ್ಯ ಅಂಗವಾಗಿರುವುದನ್ನು ಯಾರು ಅಲ್ಲಗಳೆಯುವಂತಿಲ್ಲ.

ಜಾನಪದ ಜನಪದರ ಬದುಕಿನ ಸಂಸ್ಕೃತಿಯನ್ನು ಬಿಂಬಿಸುವ ಜೀವಂತ ವ್ಯವಸ್ಥೆ. ಜನಾಂಗದ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದು ಬಂದಿರುವ ಜನಪದ ಚಿತ್ರಕಲೆ ಆಯಾ ಪ್ರದೇಶದ ಜನಾಂಗದ ಸಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರ ಸಾಮಾಗ್ರಿಯಾಗಿದೆ. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಮೌಖಿಕ ಪರಂಪರೆಯಲ್ಲಿ ಉಳಿಸಿಕೊಂಡು ಬಂದ ಹಿರಿಮೆ ಇವುಗಳಿಗೆ ಇದೆ. ವ್ಯಕ್ತಿ ತನ್ನ ಅನುಭವಗಳಿಗೆ ಜೀವ ಕೊಟ್ಟಿದ್ದು ಬಣ್ಣ ತುಂಬಿದ್ದು ಇಂಥ ಕಲೆಗಳ ಮೂಲಕವೇ. ವ್ಯಕ್ತಿಯ ಬದುಕಿನಷ್ಟೇ ವೈವಿಧ್ಯಮಯ, ವರ್ಣಮಯವಾಗಿ ಈ ಕಲೆ ಬೆಳೆದು ಬಂದಿದೆ.

ಇಂದಿನ ಶಿಷ್ಟಪರಂಪರೆ ಚಿತ್ರಕಲೆಯೇ ನಮ್ಮ ಚಿತ್ರಕಲೆ ಎಂಬ ಭ್ರಮೆಯಲ್ಲಿರುವ ನಮಗೆ ನಮ್ಮ ದೇಶಿಚಿತ್ರಕಲೆಯ ಬಗೆಗಿನ ತಿಳುವಳಿಕೆ ತೀರ ಕಡಿಮೆ. ಈ ಕೊರತೆಯನ್ನು ಹೋಗಲಾಡಿಸುವ ಪ್ರಯತ್ನವಾಗಿ ಅಕಾಡೆಮಿ ದೇಶೀ ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕ ವಿವಿಧ ಪ್ರದೇಶದ ಪ್ರಾತಿನಿಧಿಕವಾದ ಜನಪದ ಚಿತ್ರಕಲೆಯ ಗ್ರಂಥಗಳನ್ನು ಹೊರತರಲಾಗುತ್ತಿದೆ. ಇಲ್ಲಿ ಜನಪದ ಚಿತ್ರಕಲೆಯನ್ನು ತಾತ್ವಿಕ ಮತ್ತು ಸೈದ್ಧಾಂತಿಕ ನೆಲೆಯಲ್ಲಿ ವ್ಯಾಖ್ಯಾನಿಸುವ, ವಿಶ್ಲೇಷಿಸುವ ಮತ್ತು ದಾಖಲೀಕರಣಗೊಳಿಸುವ ಮಹತ್ವದ ಉದ್ದೇಶವನ್ನು ಹೊಂದಲಾಗಿದ್ದು ಕ್ಷೇತ್ರ ಕಾರ್ಯದಿಂದ ಮೂಲ ಪ್ರಮಾಣಭೂತವಾದ ಸಂಶೋಧನಾ ವಿವರಗಳು ಇಲ್ಲಿ ಹರಳುಗಟ್ಟಿ ನಿಂತಿವೆ.

ನಮ್ಮ ಮಾರ್ಗ ಸೂಚನೆಯ ಮೇರೆಗೆ ಹತ್ತುಜನ ವಿದ್ವಾಂಸರಿಗೆ ರಂಗೋಲಿ ಚಿತ್ರಕಲೆ, ಶೀಗಿ ಚಿತ್ರಕಲೆ, ಕಸೂತಿ ಚಿತ್ರಕಲೆ, ಹಚ್ಚೆ ಚಿತ್ರಕಲೆ, ಬೆಳದಿಂಗಳ ಚಿತ್ರಕಲೆ, ಚಿತ್ತಾರದ ಗೊಂಬೆ ಚಿತ್ರಕಲೆ, ನಾಗಾರಾಧನೆ ಮತ್ತು ಚಿತ್ರಕಲೆ ಯಕ್ಷಗಾನ ಮತ್ತು ಚಿತ್ರಕಲೆ, ಬಿದರಿ ಚಿತ್ರಕಲೆ, ಭೂತಾರಾಧನೆ ಮತ್ತು ಚಿತ್ರಕಲೆ ಎಂಬ ಹತ್ತು ವಿಷಯಗಳ ಕುರಿತು ಕಿರುಗ್ರಂಥಗಳನ್ನು ಬರೆಯಲು ವಿನಂತಿಸಿಕೊಳ್ಳಲಾಗಿತ್ತು, ಆದರೆ ಕೆಲವು ಜನ ವಿದ್ವಾಂಸರು ಒಪ್ಪಿಗೆ ಸೂಚಿಸಿ ಬರೆದು ಕೊಡುತ್ತೇವೆ ಎನ್ನುತ್ತಲೇ ದಿನಗಳನ್ನು ಮುಂದೂಡಿ ಕೊನೆಗೂ ಅವರಿಂದ ಬರವಣಿಗೆ ಬರದೇ ಇದ್ದಾಗ ಇಬ್ಬರು ಎರಡೆರಡು ಗ್ರಂಥಗಳನ್ನು ಬರೆಯುವುದು ಅನಿವಾರ್ಯವಾಯಿತು. ಭೂತಾರಾಧನೆ ಮತ್ತು ಚಿತ್ರಕಲೆ ಕುರಿತು ಗ್ರಂಥ ಇನ್ನು ನಮ್ಮ ಕೈ ಸೇರದೇ ಇರುವುದರಿಂದ ಸಧ್ಯ ಬಂದಿರುವ ಒಂಬತ್ತು ಕಿರು ಗ್ರಂಥಗಳನ್ನು ಪ್ರಕಟಿಸುತ್ತಿದ್ದೇವೆ.

ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪೀಟರ್ ಎ. ಲೂಯಿಸ್ ಮತ್ತು ಪ್ರಕಟಣಾ ಸಮಿತಿಯ ಸದಸ್ಯರು ಹಾಗೂ ಅಕಾಡೆಮಿಯ ಎಲ್ಲಾ ಸದಸ್ಯರು ಈ ಯೋಜನೆಯಲ್ಲಿ ಈ ಗ್ರಂಥಗಳನ್ನು ಪ್ರಕಟಿಸಲು ಸರ್ವಾನುಮತದ ಅಭಿಪ್ರಾಯವನ್ನು ವ್ಯಕ್ತಪಡಿಸುವುದರೊಂದಿಗೆ ಸಹಕಾರ ನೀಡಿದ್ದಾರೆ. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಅವರು ನನಗಿಂತಲೂ ಹೆಚ್ಚು ಕಾಳಜಿ ವಹಿಸಿ ಬರಹಗಳನ್ನು ತರಿಸಿಕೊಡಲು ಮತ್ತು ಮುದ್ರಣದ ಜವಾಬ್ದಾರಿಯನ್ನು ಹೊತ್ತು ಸಹಾಯ ಮಾಡಿದ್ದಾರೆ. ಅವರು ತೋರಿದ ಪ್ರೀತಿ, ಸಹಕಾರಕ್ಕೆ ವಂದನೆಗಳು. ಪ್ರಕಟಣೆಯಲ್ಲಿ ಸಹಾಯ ಮಾಡಿದ ಸ್ನೇಹಿತ ಸದಸ್ಯರಾದ ಪ.ಸ.ಕುಮಾರ ಅವರಿಗೂ ಅಕಾಡೆಮಿಯ ಸಿಬ್ಬಂದಿ ವರ್ಗದವರಿಗೂ ಮತ್ತು ಕಡಿಮೆ ವೇಳೆಯಲ್ಲಿ ಅಕ್ಷರ ಜೋಡಣೆ ಮತ್ತು ಪುಟವಿನ್ಯಾಸ ಮಾಡಿಕೊಟ್ಟ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಸವಿತಾ ಯಾಜಿ ಮತ್ತು ಗಣೇಶ ಯಾಜಿಯವರಿಗೆ ಸಹ ವಂದನೆಗಳನ್ನು ತಿಳಿಸುವುದು ನನ್ನ ಕರ್ತವ್ಯ ವಾಗಿದೆ.

ಬಸವ ಜಯಂತಿ | **ಡಾ. ಎಸ್. ಸಿ. ಪಾಟೀಲ**

೨೦೦೪ | **ಸಂಪಾದಕರು**

ಮಾನವನ ಸೃಜನಶೀಲ ಅಭಿವ್ಯಕ್ತಿಗಳಲ್ಲೊಂದಾದ ಚಿತ್ರಕಲೆ ಬರೀ ಸೌಂದರ್ಯೋಪಾಸನೆಯ ದೃಷ್ಟಿಯಿಂದ ಅಷ್ಟೇ ಅಲ್ಲದೇ ಆತನ ಬದುಕಿನ ಸುತ್ತ ವ್ಯಾಪಿಸಿಕೊಂಡ ಧಾರ್ಮಿಕ ನಂಬಿಕೆ, ಆಚರಣೆ, ವಿಧಿಕ್ರಿಯೆ, ಮುಂತಾದವುಗಳ ಹಿನ್ನೆಲೆಯಲ್ಲಿ ಆಯಾ ಆಚರಣೆಯ ಅವಿಭಾಜ್ಯ ಅಂಗವಾಗಿಯೂ ಅಭಿವ್ಯಕ್ತಿ ಪಡೆಯುತ್ತಾ ಬಂದಿದೆ. ಹಾಗಾಗಿಯೇ ನಮ್ಮ ಅನೇಕ ಹಬ್ಬಹರಿದಿನಗಳು, ಮದುವೆ ಮುಂಜಿ, ಜಾತ್ರೆ-ಉತ್ಸವ, ವಿಧಿಕ್ರಿಯೆ ಆಚರಣೆ ಇಂತಹ ಹತ್ತು ಹಲವಾರು ಆಚರಣೆಗಳಲ್ಲಿ ಚಿತ್ರಕಲೆಯು ಅವುಗಳ ಒಂದು ಭಾಗವಾಗಿ ರಚನೆಯಾಗುತ್ತ ಬಂದಿರುವುದನ್ನು ಕಾಣಬಹುದು.

"ಮನುಷ್ಯನ ಸಾರಸರ್ವಸ್ವವೇ ಪ್ರಕೃತಿ. ಪ್ರಕೃತಿಯ ಚಟುವಟಿಕೆಗಳಾದ ಹಗಲು, ರಾತ್ರಿ, ಮೋಡ, ಮಳೆ, ಗುಡುಗು ಸಿಡಿಲು, ಸೂರ್ಯ, ಚಂದ್ರ, ನಕ್ಷತ್ರ ಮುಂತಾದವುಗಳು ವ್ಯಕ್ತಿಯ ಬದುಕಿನ ಮೇಲೆ ಒಂದಿಲ್ಲೊಂದು ರೀತಿಯಲ್ಲಿ ಪರಿಣಾಮವನ್ನುಂಟು ಮಾಡಿವೆ. ಆ ಪರಿಣಾಮ ಗಳಿಗೆ ಪ್ರತಿಕ್ರಿಯೆಯಾಗಿ ಪೂಜೆ-ಪುನಸ್ಕಾರಗಳಂತಹ ಅನೇಕ ಆಚರಣೆಗಳು ರೂಢಿಗೆ ಬಂದವು."[೧] ಇಂಥವುಗಳಲ್ಲಿ ಚಂದ್ರನ ಪೂಜೆ ಅಥವಾ ಬೆಳದಿಂಗಳ ಪೂಜೆಯೂ ಒಂದು. ಇದರಲ್ಲಿ ಮೇಲೆ ಹೇಳಿದಂತೆ ಪೂಜೆಯ ಜೊತೆಗೆ ಚಿತ್ರಕಲೆಯು ಸಹಿತ ಅದರ ಆಚರಣೆಯ ಅವಿಭಾಜ್ಯ ಅಂಗವಾಗಿ ಅಭಿವ್ಯಕ್ತಿ ಪಡೆಯುತ್ತಾ ಬಂದಿದೆ.

ಚಂದ್ರನ ಪೂಜೆಯ ಆಚರಣೆ ಅಥವಾ ಚಂದ್ರನನ್ನು ಆರಾಧಿಸುವ ವಿಧಿ ವಿಧಾನಗಳು ಆದಿಮಾನವನಿಂದಲೇ ಬೆಳೆದು ಬಂದಂತವುಗಳಾಗಿವೆ. ಸೂರ್ಯ ಮುಳುಗಿ ಕತ್ತಲಾದಾಗ ಏನೂ ಕಾಣದೇ ಚಡಪಡಿಸಿದ ಆದಿಮಾನವನಿಗೆ ರಾತ್ರಿಯ ಚಂದ್ರನ ಬೆಳಕು ಸಂತೋಷ, ಸಂಭ್ರಮಗಳನ್ನು ಕೊಟ್ಟಿರಬಹುದು. ಹಾಗಾಗಿ ಚಂದ್ರನ ಓಲೈಸುವಿಕೆ, ಆರಾಧಿಸುವಿಕೆ ಪ್ರಾರಂಭ ವಾಯಿತು ಎನ್ನಬಹುದಾಗಿದೆ.

ಚಂದ್ರನ ಆರಾಧನೆ ಜಗತ್ತಿನ ಎಲ್ಲ ಜನಾಂಗಗಳಲ್ಲೂ ಭಿನ್ನಭಿನ್ನ ರೂಪಗಳಲ್ಲಿ ಕಂಡು ಬರುತ್ತದೆ. ಪ್ರತಿ ಜನಾಂಗವೂ ಚಂದ್ರನ ಬಗೆಗೆ ಪುರಾಣ, ನಂಬಿಕೆ, ಕಥೆಗಳನ್ನು ಒಳ ಗೊಂಡಿವೆ.

ಪ್ರಾಚೀನ ಗ್ರೀಕರ ಪುರಾಣಗಳಲ್ಲಿ ಆರ್ತಿಮಿಸ್ ಎಂಬ ಕನ್ಯೆದೇವತೆ ಚಂದ್ರನಿಗೆ ಸಂಬಂಧಿಸಿದವಳಾಗಿದ್ದಾಳೆ. ಪ್ರಾಚೀನ ಇಟಾಲಿಯನ್‌ರು ಡಯಾನಾ ಎಂಬ ಚಂದ್ರ ದೇವತೆಯನ್ನು ಆರಾಧಿಸುತ್ತಿದ್ದರು. ಬ್ಯಾಬಿಲೋನಿಯಾ ಮತ್ತು ಅಸ್ಸೀರಿಯಾ ದೇಶಗಳ ಸಂಸ್ಕೃತಿಯಲ್ಲಿ ಚಂದ್ರನ ಆರಾಧನೆ ಕಂಡುಬರುತ್ತದೆ.

ಭಾರತೀಯರಲ್ಲೂ ಚಂದ್ರನನ್ನು ಆರಾಧಿಸುವ ಪರಂಪರೆ ಬಹಳ ಹಿಂದಿನಿಂದಲೇ ನಡೆದುಕೊಂಡು ಬಂದಿದೆ.[೨] ನಮ್ಮ ನಾಡಿನ ಕೆಲವು ಸ್ಥಳಗಳಲ್ಲಿ ಚಂದ್ರನನ್ನು ಬೆಳದಿಂಗಳ ರೂಪದಲ್ಲಿ ಆರಾಧಿಸುತ್ತಾರೆ. ಇದನ್ನು ಬೆಳದಿಂಗ್ಳಪ್ಪನ ಪೂಜೆ, ಬೆಳದಿಂಗ್ಳಪ್ಪನ ಹೊಯ್ಯುವುದು, ಚಂದ್ರಾಮನ ಪೂಜೆ, ಚಂದ್ರಮ್ಮನ ಪೂಜೆ, ತಿಂಗಳು ಮಾವನಪೂಜೆ ಎಂಬ ಹೆಸರುಗಳಿಂದ ಕರೆಯುತ್ತಾರೆ.

ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಚಂದ್ರನ ಆರಾಧನೆಯನ್ನು ಪ್ರಾದೇಶಿಕವಾಗಿ ಭಿನ್ನ ಭಿನ್ನ ಹೆಸರುಗಳಿಂದ ಕರೆಯುತ್ತಾರೆ. ತುಮಕೂರು, ಹಾಸನ, ಮಂಡ್ಯ, ಚಿಕ್ಕಮಗಳೂರು ಭಾಗದಲ್ಲಿ ತಿಂಗಳ ಮಾವನ ಪೂಜೆ, ಬೆಳದಿಂಗಳಪ್ಪನ ಪೂಜೆ, ಬೆಳದಿಂಗಳಪ್ಪನ ಹೊಯ್ಯುವುದು, ಹಸೆ ಬರೆಯುವುದು ಎಂದು ಕರೆದರೆ, ಕೋಲಾರ, ಆಂಧ್ರಪ್ರದೇಶದ ಕನ್ನಡ ಸರಹದ್ದುಗಳಲ್ಲಿ ಸುನ್ನಬಯಲು, ಗೌರಿಬಿದನೂರಿನ ಭಾಗದಲ್ಲಿ ಪುನ್ನಲುಪುಲು, ಚಂದ್ರಮ್ಮನ ಪೊಸೇದಿ, ಚಂದ್ರಮ್ಮ ಪಾಟ ಎಂದು ಹೆಸರಿಸುತ್ತಾರೆ.[೩]

ಉತ್ತರ ಕರ್ನಾಟಕದಲ್ಲಿ ಈ ಆರಾಧನೆಯನ್ನು ಬೆಳದಿಂಗಳು ಬರೆಯುವುದು, ಬೆಳ್ದಿಂಗಳ ಹೊಯ್ಯುವುದು, ಬೆಳದಿಂಗಳ ತೇರ ತೆಗೆಯುವುದು, ಬೆಳದಿಂಗಳನ್ನು ಕರೆದುಕೊಳ್ಳುವುದು, ದೇವರನ್ನೂ ಕರೆದುಕೊಳ್ಳುವುದು, ಚಂದ್ರಾಮನ ಪೂಜೆ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಚಂದ್ರನ ಕುರಿತು ಈ ಆರಾಧನೆಯ ವಿಧಿ ವಿಧಾನಗಳಲ್ಲಿ ಮಾತ್ರವಲ್ಲದೇ ಅಲ್ಲಿ ರಚನೆಯಾಗುವ ಚಿತ್ರ ವಿನ್ಯಾಸಗಳಲ್ಲೂ ಪ್ರಾದೇಶಿಕ ಭಿನ್ನತೆಗಳಿವೆ.

ಚಂದ್ರನ ಆರಾಧನೆಯ ಕುರಿತಾಗಿ ಅನೇಕ ಬಗೆಯ ಮಾಹಿತಿ ಲಭ್ಯವಿದ್ದರೂ ಈ ಪುಸ್ತಕವು ಚಿತ್ರಕಲೆಯ ಕುರಿತಾಗಿರುವುದರಿಂದ, ಕರ್ನಾಟಕದಲ್ಲಿ ಚಂದ್ರನ ಆರಾಧನೆಯ ಸಂದರ್ಭದಲ್ಲಿ ರಚನೆಯಾಗುವ ಚಿತ್ರವಿನ್ಯಾಸಗಳ ಬಗ್ಗೆ ಮಾತ್ರ ಹೆಚ್ಚಿನ ಗಮನ ಕೊಡಲಾಗಿದೆ.

ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಬೆಳದಿಂಗಳು ಹೊಯ್ಯುವುದು, ಬೆಳ್ಳಿಂಗ್ಳಪ್ಪನ ಪೂಜೆ, ಅಥವಾ ತಿಂಗಳಮಾವನ ಪೂಜೆಯು ಒಂದು ಜನಪದ ಚಿತ್ರಕಲೆಯಾಗಿದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಈ ಜನಪದ ಚಿತ್ರಕಲೆಯು ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿ ಶಿಷ್ಟಪದ ಚಿತ್ರಕಲೆಗಿಂತ ಭಿನ್ನವಾಗಿದೆ.

ಗ್ರಾಮೀಣರ ಲಕ್ಷಣಮುಕ್ತ ಅಥವಾ ತಮಗೆ ಅಂದಚಂದ ಕಂಡಂತೆ ರಚಿಸಿಕೊಂಡ ಚಿತ್ರಕಲೆ ಜನಪದ ಚಿತ್ರಕಲೆಯಾಗಿದೆ. ಉದ್ದ, ಅಗಲದಂತಹ ನಿರ್ದಿಷ್ಟ ಪ್ರಮಾಣ ಬದ್ಧತೆಗಳು, ಚಿತ್ರಗಳು ಹೀಗೆ ಇರಬೇಕೆನ್ನುವ ನೀತಿನಿಯಮಗಳು ಜನಪದ ಚಿತ್ರಕಲೆಗೆ ಇಲ್ಲ. ಜನಪದರು ತಮ್ಮ ಬದುಕಿನ ಬಣ್ಣವನ್ನೇ ಅವರು ಸರಳವ್ರೋ, ವಕ್ರವ್ರೋ ಆದ ರೇಖೆಗಳನ್ನು, ಅವರ ಮನಸ್ಸಿನ ಯಾವುದೋ ಆನಂದದ ಬೊಟ್ಟನ್ನು ಅವರ ಸಂತೋಷದ ನೂರಾರು ಭಾವನೆಗಳನ್ನು ಹೇಳಲು ಆಯ್ದುಕೊಂಡ ವಿವಿಧ ವಿನ್ಯಾಸಗಳನ್ನೇ ಚಿತ್ರರೂಪದಲ್ಲಿ ತಂದಿದ್ದಾರೆ.[೪]

ಜನಪದ ಚಿತ್ರಕಲೆಯಲ್ಲಿ ಸೂಕ್ಷ್ಮಗಾರಿಕೆ, ಕೃತಕತೆ, ಅತಿಶಯತೆಗಳು ಕಂಡುಬರುವುದಿಲ್ಲ. ಇಲ್ಲಿನ ಮೂರ್ತ ಅಮೂರ್ತ ರೂಪಗಳು ಸರಳ ಚೌಕಟ್ಟಿನೊಂದಿಗೆ, ಮನಸ್ಸಿನ ಸ್ವಾತಂತ್ರ್ಯದೊಂದಿಗೆ, ಸಮೂಹ ಸೃಷ್ಠಿಯಾಗಿ ವ್ಯಕ್ತಗೊಳ್ಳುತ್ತವೆ. ಹಾಗಾಗಿ ಜನಪದ ಚಿತ್ರಕಲೆ ವ್ಯಕ್ತಿಸೃಷ್ಠಿಯಾಗಿದ್ದರೂ ಸಮಷ್ಠಿಯ ಗುಂಪಾಗಿ, ಆಚರಣೆಯಾಗಿ, ಸಂಪ್ರದಾಯವಾಗಿ ಗುಂಪಿನ ಇಲ್ಲವೆ ತಮ್ಮ ಪಾಲಿನ ಸಾಮಾಜಿಕ ಚಟುವಟಿಕೆಯಾಗಿ ಅರ್ಥ ಪಡೆದು ನಿಲ್ಲುತ್ತದೆ.

ಜನಪದ ಚಿತ್ರಕಲೆಯು ಗ್ರಾಮೀಣ ಜನರ ಬದುಕಿನ ಹಿನ್ನೆಲೆಯಲ್ಲಿ ಸೃಷ್ಠಿಯಾಗುತ್ತದೆ. ಇಲ್ಲಿನ ರೇಖೆ ಮತ್ತು ಬಣ್ಣಗಳದೇ ಒಂದು ಸೊಬಗು. ದಪ್ಪನಾದ ಜೀವಂತಿಕೆಯಿಂದ ಕೂಡಿದ ರೇಖೆಗಳು ಪ್ರಖರ ವರ್ಣಗಳು ಜನಪದ ಚಿತ್ರಕಲೆಯ ಜೀವಾಳವಾಗಿವೆ. ಹೀಗೆ ಹತ್ತು ಹಲವು ಲಕ್ಷಣಗಳನ್ನು ಜನಪದ ಚಿತ್ರಕಲೆಗೆ ಅನ್ವಯಿಸಿ ಹೇಳಬಹುದು.[೫] ಇಂತಹ ಲಕ್ಷಣಗಳು ಬೆಳದಿಂಗಳು ಬರೆಯುವ ಚಿತ್ರ ವಿನ್ಯಾಸದಲ್ಲಿ ಇರುವುದರಿಂದ ಇದನ್ನು ಅಪ್ಪಟ ಜನಪದ ಚಿತ್ರಕಲೆ ಎಂಬುದಾಗಿ ಪರಿಗಣಿಸಲಾಗಿದೆ.

ಕರ್ನಾಟಕದಲ್ಲಿ ಭಾರತ ಹುಣ್ಣಿಮೆ ಅಥವಾ ಗುಡಿಹುಣ್ಣಿಮೆಯ ಸಂದರ್ಭದಲ್ಲಿ ಚಂದ್ರನ ಆರಾಧನೆ ಮಾಡಲಾಗುತ್ತದೆ. ಈ ಭಾರತ ಹುಣ್ಣಿಮೆಯು ಇನ್ನೂ ಐದು ದಿನ ಇದೆ ಎನ್ನುವಾಗ ಈ ಆಚರಣೆಯು ಪ್ರಾರಂಭವಾಗಿ ಹುಣ್ಣಿಮೆ ದಿನ ಕೊನೆಗೊಳ್ಳುತ್ತದೆ. ಮೊದಲಿನ ನಾಲ್ಕುದಿನ ರಾತ್ರಿ ಹೊತ್ತಿನಲ್ಲಿ ವಿವಿಧ ರೀತಿಯ ಚಿತ್ರ ವಿನ್ಯಾಸಗಳನ್ನು ಸುಣ್ಣದಿಂದ ಬರೆದು ಪೂಜಿಸಿದರೆ, ಐದನೆಯ ಅಂದರೆ ಹುಣ್ಣಿಮೆಯ ದಿನ ಹಗಲು ಹೊತ್ತಿನಲ್ಲಿ ಸುಣ್ಣ ಇಲ್ಲವೆ ಕೆಮ್ಮಣ್ಣಿನಿಂದ ಚಿತ್ರಬರೆದು ಪೂಜಿಸುತ್ತಾರೆ. ಬೆಳದಿಂಗಳು ಹೊಯ್ಯುವ ಈ ಆಚರಣೆಯು ಜಾತಿಭೇದವಿಲ್ಲದೇ ಎಲ್ಲ ಜನಾಂಗಗಳ ಮಹಿಳೆಯರಿಂದಲೂ ಆಚರಿಸಲ್ಪಡುತ್ತದೆ.

ಚಂದ್ರನ ವೃದ್ಧಿ ಕ್ಷಮಗುಣಗಳಿಗೂ ಮಹಿಳೆಯರ ಋತು ಚಕ್ರಕ್ಕೂ ಹಾಗೂ ಮುಂದಿನ ಸಂತಾನ ಪ್ರಾಪ್ತಿಗೂ ಚಂದ್ರನ ಆರಾಧನೆ ಮತ್ತು ಬೆಳದಿಂಗಳ ಪೂಜೆಗೂ ಆಂತರಿಕ ಸಂಬಂಧಗಳಿವೆ ಎನ್ನಬಹುದು. ಇದಿಷ್ಟೇ ಅಲ್ಲದೆ ನಮ್ಮ ನಾಡಿನ ಅನೇಕ ಆಚರಣೆಗಳನ್ನು ನೋಡಿದಾಗ

ಹುಣ್ಣಿಮೆ ಮತ್ತು ಚಂದ್ರನೊಂದಿಗೆ ಸಂಬಂಧ ಹೊಂದಿರುವುದನ್ನು ಗಮನಿಸಿದಾಗ, ಚಂದ್ರನು ನಮ್ಮ ಬದುಕಿನ ಮೇಲೆ ಬೀರಿರುವ ಗಾಢ ಪ್ರಭಾವದ ಅರಿವಾಗುತ್ತದೆ.

ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಬೆಳದಿಂಗಳ ಪೂಜಾ ವಿಧಾನ ಅಥವಾ ಆರಾಧನಾ ಕ್ರಮ, ಚಿತ್ರವಿನ್ಯಾಸಗಳನ್ನು ಬರೆಯುವ ಕ್ರಮಗಳಲ್ಲಿ ವ್ಯತ್ಯಾಸಗಳಿದ್ದರೂ, ಮೂಲ ಆಶಯಗಳು ಮಾತ್ರ ಒಂದೇ ಆಗಿರುತ್ತವೆ. ಈ ಬೆಳದಿಂಗಳ ಪೂಜೆಯನ್ನು ಕಲಾದೃಷ್ಟಿಯಿಂದ ವಿಶ್ಲೇಷಿಸುವಾಗ ಅದನ್ನು ಸ್ಥೂಲವಾಗಿ ೧. ಆರಾಧನಾಕ್ರಮ ೨. ಸ್ವರೂಪ ೩. ಪರಿಕರಗಳು ೪. ರಚನಾವಿಧಾನ ೫. ವಸ್ತುವಿಷಯಗಳು ಮತ್ತು ೬. ನಂಬಿಕೆಗಳು ಎಂಬುದಾಗಿ ವಿಂಗಡಿಸಿಕೊಂಡು ವಿವೇಚಿಸಬಹುದು.

೧. ಆರಾಧನಾಕ್ರಮ

ಬೆಳದಿಂಗಳಪ್ಪನ ಆರಾಧನಾ ವಿಧಾನವೇ ಪರೋಕ್ಷವಾಗಿ ಬೆಳದಿಂಗಳ ಬರೆಯುವ ವಿಧಾನವೂ ಆಗಿದೆ. ಚಿತ್ರರಚನೆಗೆ ತೊಡಗುವ ಪೂರ್ವದ ತಯಾರಿ, ಚಿತ್ರಬರೆಯುವ ಹಂತ ಮತ್ತು ನಂತರ ನೈವೇದ್ಯ ಅರ್ಪಿಸಿ ಪೂಜಿಸುವ ಕ್ರಿಯೆಗಳು ಇದರಲ್ಲಿ ಒಳಗೊಳ್ಳುತ್ತವೆ. ಈ ಕ್ರಿಯೆಗಳು ಸಹಿತ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯಿಂದ ಕೂಡಿವೆ.

ದಕ್ಷಿಣ ಕರ್ನಾಟಕ ಭಾಗದಲ್ಲಿ ಇದರ ಆಚರಣೆಯ ವಿಧಾನ ಹೀಗಿದೆ. ಭಾರತ ಹುಣ್ಣಿಮೆಯ ಮುಂಚಿನ ದಿನಗಳಲ್ಲಿ, ಎಳೆಯ ಬೆಳದಿಂಗಳು ಇರುವ ಸಂದರ್ಭದಲ್ಲಿ, ಹಳ್ಳಿಯ ಹೆಣ್ಣು ಮಕ್ಕಳು ಹಿರಿಯರ ಸಹಕಾರದಿಂದ ಚರ್ಚೆ ಮಾಡುತ್ತಾರೆ. ಈ ಚರ್ಚೆಯ ಸಂದರ್ಭದಲ್ಲಿ ಬೆಳದಿಂಗಳ ಆಚರಣೆಗೆ ಒಂದು ದಿನ ಗೊತ್ತು ಮಾಡಿ, ಪೂಜಾದಿಗಳಿಗೆ ಹಣ ಸಂಗ್ರಹಿಸುತ್ತಾರೆ. ಇಲ್ಲಿ ಸಿಂಹಪಾಲು ಹುಡುಗಿಯರದೇ ಇರುತ್ತದೆ. ಪೂಜೆಯು ಮೂರು, ಐದು ಇಲ್ಲವೆ ಒಂಭತ್ತು ದಿನ ಎಂದು ನಿಗದಿಗೊಳಿಸುತ್ತಾರೆ. ಪೂಜೆಯನ್ನು ಪ್ರಾರಂಭಿಸುವ ಗುಡಿಯ ಹತ್ತಿರ ಹಬ್ಬದ ಸಂಭ್ರಮ. ಹೊಸಬಟ್ಟೆಯ ಸಡಗರ. ಚಿಕ್ಕವರು ದೊಡ್ಡವರೆನ್ನದೇ ಎಲ್ಲ ವಯಸ್ಸಿನವರೂ ಎಲ್ಲ ಜನಾಂಗದವರೂ ಸೇರುತ್ತಾರೆ. ಹೆಣ್ಣು ಮಕ್ಕಳು ಆ ಸ್ಥಳವನ್ನು ಸ್ವಚ್ಛವಾಗಿ ಗುಡಿಸಿ ಸಾರಿಸುತ್ತಾರೆ.

ಆಕಳ ಸಗಣಿಯನ್ನು ಸಾರಿಸಿ ಅದರ ಮೇಲೆ ಬೆಳದಿಂಗಳಪ್ಪನ ಹಸೆ ಬರೆಯುತ್ತಾರೆ. ರಾಗಿಯ ಹಿಟ್ಟಿನಿಂದ ಸೂರ್ಯನನ್ನು, ಅದರ ಪಕ್ಕದಲ್ಲಿ ಕೆಮ್ಮಣ್ಣಿನಿಂದ ಮೂಡುತ್ತಿರುವ ಚಂದ್ರನನ್ನು ರಚಿಸುತ್ತಾರೆ. ಇದರ ಎದುರಿನ ಮೂಲೆಯಲ್ಲಿ ಅಕ್ಕಿ ಹಿಟ್ಟಿನಿಂದ ಬಿಳಿಯಾದ ಪೂರ್ಣ ಚಂದ್ರನನ್ನು ಬರೆಯುತ್ತಾರೆ. ಆಮೇಲೆ ಸಾರಿಸಿದ ಸ್ಥಳದ ಅಂಚಿಗೆ ರಂಗೋಲಿಯ ಎರಡೆಳೆಯ ಅಂಚು ಬಿಡುತ್ತಾರೆ. ಇವಲ್ಲದೆ ಗಿಳಿ, ಜಿಂಕೆ, ಅಳಿಲುಗಳಂತಹ ಚಿತ್ರಗಳನ್ನೂ ರಚಿಸುತ್ತಾರೆ.

ಆಮೇಲೆ ಅರಿಷಿಣ, ಕುಂಕುಮ, ವಿಭೂತಿ, ಹೂಗಳನ್ನು ಉಪಯೋಗಿಸಿ ಪೂಜೆ ಮಾಡುತ್ತಾರೆ. ಈ ಪೂಜೆಯಲ್ಲಿ ಮದುವೆಯ ಕಾರ್ಯಕ್ರಮವೇ ನಡೆಯುತ್ತದೆ. ಇದು ತಿಂಗಳ ಮಾವನಿಗೆ ಸಂಬಂಧಿಸಿದ್ದು ಎಂದು ನಂಬುತ್ತಾರೆ.

ಸುಮಾರು ೮ ರಿಂದ ೧೨ ವರ್ಷದ ಒಳಗಿನ ಇಬ್ಬರು ಹುಡುಗಿಯರನ್ನು ಗಂಡು ಹೆಣ್ಣಾಗಿ ಆರಿಸುತ್ತಾರೆ. ಗಂಡು ಹೆಣ್ಣು ಕೂಡ್ರುವ ಸ್ಥಳದಲ್ಲಿಯೂ ಸಹಿತ ಆಕಳ ಸಗಣಿಯಿಂದ ಸಾರಿಸಿ ಚಂದ್ರನ ಹಸೆ ಬರೆಯುತ್ತಾರೆ. ಹಸೆಯ ಮೇಲೆ ನಾಲ್ಕು ಮೂಲೆಗೂ ನಾಲ್ಕು ಸಪ್ಪರೊಟ್ಟಿ, ಮಧ್ಯದಲ್ಲೊಂದು ಸಪ್ಪರೊಟ್ಟಿ ಇಟ್ಟು ಅಲ್ಲಿ ಕಳಸವಿಡುತ್ತಾರೆ.

ಈ ಸಪ್ಪರೊಟ್ಟಿಗಳನ್ನು ಒಂದೇ ಬದಿ ಬೇಯುವಂತೆ ಸುಡುತ್ತಾರೆ. ಹಾಗಾಗಿ ಈ ರೊಟ್ಟಿಗಳು ಒಂದು ಕಡೆಗೆ ಬೆಂದು ಕಪ್ಪಾಗಿ ಇನ್ನೊಂದು ಕಡೆಗೆ ಬೆಳ್ಳಗೆ ಉಳಿದುಕೊಂಡಿರುತ್ತವೆ. ಹೀಗೆ ಬೆಳ್ಳಗಿರುವ ರೊಟ್ಟಿಯ ಮುಖವನ್ನೇ ಚಂದ್ರ ಅಥವಾ ಚಂದ್ರಮಾವನೆಂದು ಭಾವಿಸಿ ಪೂಜಿಸುತ್ತಾರೆ.

ಮದುವೆಯಂತೆ ನಡೆಯುವ ಈ ಪೂಜೆಯಲ್ಲಿ ತೊಳೆದು ಸ್ವಚ್ಛವಾಗಿ ಬೆಳಗಿದ ಬಿಂದಿಗೆಗಳಲ್ಲಿ ಸಮೀಪದ ಹಳ್ಳಕೊಳ್ಳ ಅಥವಾ ಕೆರೆಬಾವಿಗಳಿಂದ ನೀರು ತುಂಬಿಕೊಂಡು ಬರುತ್ತಾರೆ. ಇದನ್ನು ಗಂಗಮ್ಮನ ತರುವುದು ಎನ್ನುತ್ತಾರೆ. ಈ ಪವಿತ್ರವಾದ ನೀರಿನಿಂದಲೇ ಪೂಜಾಕಾರ್ಯ ನೆರವೇರಿಸುತ್ತಾರೆ. ಈ ಚಂದ್ರನ ಮದುವೆಗೆ ಕೆಲವರು ಚಪ್ಪರವನ್ನೂ ಹಾಕುತ್ತಾರೆ.

ಮದು ಮಕ್ಕಳಿಗೆ ಬೇಕಾಗುವ ಆಭರಣ, ವಸ್ತ್ರ, ವಡವೆಗಳನ್ನು ವಿವಿಧ ಮನೆಗಳಿಂದ ತಂದಿರುತ್ತಾರೆ. ಚಪ್ಪರವನ್ನು ತೆಂಗಿನಗರಿ, ಬಾಳೆದಿಂಡು, ಮಾವಿನಸೊಪ್ಪು, ಹೂಗಳಿಂದ ಶೃಂಗರಿಸುವುದೂ ನಡೆಯುತ್ತದೆ. ಮದುವೆಯಂತೆ ನಡೆಯುವ ಈ ಚಂದ್ರನ ಪೂಜೆಯಲ್ಲಿ ಹೆಣ್ಣು ಕೇಳುವುದು, ಗಂಡನ್ನು ಒಪ್ಪಿಸುವುದು, ಧಾರೆ ಎರೆಯುವುದು, ಬೀಗರು ಬೀಗರು ಚುಡಾಯಿಸುವುದು, ಸೋಬಾನ ಪದಗಳು, ಹಸೆ ಬರೆಯುವುದು, ಗಂಗಮ್ಮನ ಪೂಜೆ, ಹೆಣ್ಣಿಗೆ ಗಂಡಿಗೆ ನೀರು ಹೊಯ್ಯುವುದು, ಮಂಗಳಾರತಿ ಹೀಗೆ ವಿವಿಧ ಬಗೆಯ ಹಾಡುಗಳನ್ನು ಹಾಡಲಾಗುತ್ತದೆ.

ಪೂಜೆಯ ಕೊನೆಯ ಹಂತವಾಗಿ ಬೆಳದಿಂಗಳನ್ನು ಅಂದರೆ ಚಂದ್ರನ ಹಸೆಯನ್ನು ಪೂಜಿಸಿ ನೈವೇದ್ಯಮಾಡಿ ಎಲ್ಲರೂ 'ಫಳಾರ' ಸ್ವೀಕರಿಸುತ್ತಾರೆ. ಈ ಸಂದರ್ಭದಲ್ಲಿ ಚಂದ್ರನ ಹಸೆಯ ಚಿತ್ರವನ್ನು ನಾನಾ ರೀತಿಯ ಹೂ ಪತ್ರೆಗಳಿಂದ ಮತ್ತು ಕಣಗಿಲ ಹೂವಿನಿಂದ ಅಲಂಕರಿಸಿ ಪೂಜಿಸುತ್ತಾರೆ.

ಕಣಗಿಲ ಹೂವನ್ನು ವಿಶೇಷವಾಗಿ ಬಳಸುತ್ತಾರಾದರೂ ಅದು ಸಿಗದಿದ್ದಾಗ ತುಂಬೇ ಹೂವನ್ನೂ ಉಪಯೋಗಿಸುತ್ತಾರೆ. ಕಳಸದಲ್ಲಿ ಕಣಗಿಲ ಹೂವನ್ನು ಸಿಕ್ಕಿಸಿ ಎಳ್ಳಿನ ಆರತಿ

ಮಾಡುತ್ತಾರೆ. ಹೂ ಪತ್ರೆ, ಬೆಲ್ಲ, ತೆಂಗಿನಕಾಯಿ, ಬಾಳೆಹಣ್ಣು, ಚುರಮರಿ ಮುಂತಾದವುಗಳನ್ನು ನೈವೇದ್ಯವಾಗಿ ಅರ್ಪಿಸುತ್ತಾರೆ. ಈ ಸಂದರ್ಭದಲ್ಲಿಯೂ ವಿವಿಧ ಹಾಡುಗಳನ್ನು ಮಹಿಳೆಯರು ಹಾಡುತ್ತಲೇ ಇರುತ್ತಾರೆ.

ಕೊನೆಯ ಹಂತವಾಗಿ ಬೆಳದಿಂಗಳಪ್ಪನ ಹಸೆಯ ಮೇಲಿನ ಹೂ, ಅಕ್ಕಿ, ರೊಟ್ಟಿ, ಕಾಯಿ ಮುಂತಾದ ಎಲ್ಲಾ ಪೂಜಾ ಸಾಮಗ್ರಿಗಳನ್ನು ಸಮೀಪದ ಕೆರೆ, ಕಟ್ಟೆ, ಬಾವಿ, ಇಲ್ಲವೆ ಬನ್ನಿಯ ಮರ, ಅಶ್ವತ್ಥ ವೃಕ್ಷದ ಬಳಿಯಲ್ಲಿ ಹೋಗಿ ಬಿಟ್ಟುಬರುತ್ತಾರೆ. ಇದಕ್ಕೆ "ಬೆಳ್ದಿಂಗ್ಳಪ್ಪನ ಸಾಗು ಹಾಕುವಿಕೆ" ಎಂದು ಕರೆಯುತ್ತಾರೆ.

ಕೋಲಾರ ಜಿಲ್ಲೆಯ ಗೌರಿಬಿದನೂರಿನ ಪ್ರದೇಶದಲ್ಲಿ 'ಪುನ್ನಲುಪೂಲು' ಎಂದು ಕರೆಯುವ ಈ ಆಚರಣೆಯು ಐದರಿಂದ ಹನ್ನೆರಡು ದಿನಗಳವರೆಗೆ ನಡೆಯುತ್ತದೆ. ಹೆಣ್ಣು ಮಕ್ಕಳು ಒಂದು ಮನೆಯ ಅಂಗಳದಲ್ಲಿ ಸೇರುತ್ತಾರೆ. ಮೊದಲ ದಿನ ಸಗಣಿಯಿಂದ ಸಾರಿಸಿದ ನೆಲದ ಮೇಲೆ ರಂಗೋಲಿ ಹಿಟ್ಟಿನಿಂದ ಚಂದ್ರಮನನ್ನು ಹೊಯ್ಯುವರು. ಅದರಲ್ಲಿ 'ಪಿಳ್ಳಾರಿ' ಇರಿಸಿ ಅರಿಷಿಣ ಕುಂಕುಮ ಹಚ್ಚಿ ಪೂಜಿಸಿ ಪ್ರಸಾದ ಹಂಚುವರು. ಇದಕ್ಕೆ ಮೊದಲು ಎರಡು ಗುಂಪಾಗಿ ಸೊಗಸಾದ ಹಾಡುಗಳನ್ನು ಹಾಡುವರು. ಕೊನೆಯಲ್ಲಿ ಆರತಿ ಬೆಳಗಿ ಫಳಾರ ಹಂಚುವರು.

ಗುಡಿಬಂಡೆ ಪ್ರದೇಶದ ಕಡೆಗೆ ಚಂದ್ರನ ಆಚರಣೆ ಒಂಭತ್ತು ದಿನ ನಡೆಯುತ್ತದೆ. ಮಳೆಯನ್ನು ಬಯಸಿ ಮಾಡುವ ಚಂದ್ರನ ಆಚರಣೆ ಇದು. ಬೆಳದಿಂಗಳ ಬೆಳಕಿನಲ್ಲಿ ಅಂಗಳದ ಹೊರಗೆ ಗಂಡುಹುಡುಗರು ಉಪ್ಪಾರ ಪಟ್ಲು ಆಟ ಆಡುತ್ತಿದ್ದರೆ, ಹೆಂಗಳೆಯರು ನೆಲಸಾರಿಸಿ ಸುಣ್ಣದಿಂದ ಚಂದ್ರನನ್ನು ಬರೆಯುತ್ತಾರೆ. ಹೀಗೆ ಬರೆದ ಬೆಳದಿಂಗಳ ಚಿತ್ರದಲ್ಲಿ ನಡುವೆ ಹೂ, ಎಲೆ, ಅಡಿಕೆ, ತೆಂಗಿನಕಾಯಿ, ಪಿಳ್ಳಾರಿ ಇರಿಸಿ, ಹಾಡುಹೇಳಿ ಪೂಜೆ ಮಾಡುತ್ತಾರೆ. ಹೀಗೆ ಒಂಭತ್ತು ದಿನ ಮಾಡಿ ಒಂಭತ್ತನೆಯ ದಿನ ರಾಗಿಹಿಟ್ಟಿನ ರೊಟ್ಟಿಯನ್ನು ಮಾಡಿ ನೈವೇದ್ಯ ಮಾಡಿ ಬಂದ ವರಿಗೆ ಹಂಚುತ್ತಾರೆ.

ಇದಲ್ಲದೇ ಒಂಭತ್ತನೆಯ ದಿನ ಈ ಚಂದ್ರನ ಹಸೆಯ ಮೇಲೆ ನಡುವೆ ಒಂದು ಗುಂಡು ಕಲ್ಲು ಇರಿಸುತ್ತಾರೆ. ನಂತರ ಅನೇಕ ಹೆಣ್ಣು ಮಕ್ಕಳು ತಮ್ಮ ಕಾಲುಗಳನ್ನು ಈ ಗುಂಡು ಕಲ್ಲಿಗೆ ಜೋಡಿಸಿ ಅದರ ಸುತ್ತಲೂ ಕುಳಿತು ಕೊಳ್ಳುತ್ತಾರೆ.[೬] ಆಮೇಲೆ ಕಲ್ಲುಗುಂಡಿಗೆ ಜೋಡಿಸಿದ ಕಾಲುಗಳನ್ನು ಕೀಳಲಾರದೆಯೇ ತಮ್ಮ ಎರಡೂ ಕೈಗಳನ್ನು ಹಿಂದಕ್ಕೆ ಊರಿ ಕೊಂಡು ವೃತ್ತಾಕಾರವಾಗಿ ತಿರುಗುತ್ತಾರೆ.

ಈ ಸಂದರ್ಭದಲ್ಲಿ ತಿರುಗುತ್ತಿರುವ ಈ ಹೆಣ್ಣು ಮಕ್ಕಳು ಮಳೆ ಮತ್ತು ಚಂದ್ರನ ಕುರಿತು ಹಾಡುಗಳನ್ನು ಹಾಡುತ್ತಿದ್ದರೆ, ಹಿರಿಯ ಹೆಂಗಸರು ಮಧ್ಯದ ಗುಂಡುಕಲ್ಲಿಗೆ ನೀರು ಹೊಯ್ಯುತ್ತಾರೆ. ಇದರಿಂದ ಮಳೆ ಬರುತ್ತದೆ ಎಂದು ನಂಬುತ್ತಾರೆ.



ಬೆಳದಿಂಗಳ ಚಿತ್ರಕಲೆ



ಬೆಳದಿಂಗಳ ಚಿತ್ರಕಲೆ



ಬೆಳದಿಂಗಳ ಚಿತ್ರಕಲೆ



ಬೆಳದಿಂಗಳ ಚಿತ್ರಕಲೆ



ಬೆಳದಿಂಗಳ ಚಿತ್ರಕಲೆ



ಬೆಳದಿಂಗಳ ಚಿತ್ರಕಲೆ



ಬೆಳದಿಂಗಳ ಚಿತ್ರಕಲೆ



ಬೆಳದಿಂಗಳ ಚಿತ್ರಕಲೆ



ಬೆಳದಿಂಗಳ ಚಿತ್ರಕಲೆ



ಬೆಳದಿಂಗಳ ಚಿತ್ರಕಲೆ



ಬೆಳದಿಂಗಳ ಚಿತ್ರಕಲೆ



ಬೆಳದಿಂಗಳ ಚಿತ್ರಕಲೆ

ಬಾಗಲಕೋಟೆ, ಬೆಳಗಾಂವ ಭಾಗದಲ್ಲಿಯು ಮಳೆಗಾಗಿ ಇಂತಹ ಚಂದ್ರನ ಆರಾಧನೆ ಕಂಡುಬರುತ್ತದೆ. ಆದರೆ ಇದು ಭಾರತ ಹುಣ್ಣಿಮೆ ಇಲ್ಲವೆ ಗುಡಿಹುಣ್ಣಿಮೆಯಂದು ನಡೆಯದೇ ಅನುಕೂಲವಾದ ಯಾವುದೇ ಹುಣ್ಣಿಮೆಯ ಬೆಳದಿಂಗಳಲ್ಲೂ ನಡೆಯುತ್ತದೆ.

ಈ ಭಾಗಗಳಲ್ಲಿ ನಿರ್ದಿಷ್ಟ ಪಡಿಸಿದ ಒಂದು ಬೆಳದಿಂಗಳ ರಾತ್ರಿಯಲ್ಲಿ ಮನೆಯ ಮುಂದಿನ ಅಂಗಳದ ನೆಲವನ್ನು ಸ್ವಚ್ಛವಾಗಿ ಗುಡಿಸಿ ಸಗಣಿಯನ್ನು ಸಾರಿಸುತ್ತಾರೆ. ಅದರ ಮೇಲೆ ಸುಣ್ಣದಿಂದ ಚಂದ್ರನ ಚಿತ್ರ ಬರೆಯುತ್ತಾರೆ. ಜೊತೆಗೆ ಚಿಕ್ಕದಾದ ಸೂರ್ಯನನ್ನು ಬರೆಯುತ್ತಾರೆ.

ಆಮೇಲೆ ಈ ಬೆಳದಿಂಗಳ ಚಿತ್ರವನ್ನು ಪೂಜಿಸುತ್ತಾರೆ. ಮತ್ತೆ ಅದರ ಮಧ್ಯದಲ್ಲಿ ಜೋಳವನ್ನು ದಪ್ಪವಾಗಿ ಹರಡುತ್ತಾರೆ. ಅದರ ಮೇಲೆ ಅಂದರೆ ಜೋಳದ ಮೇಲೆ ನೀರು ತುಂಬಿದ ಕೊಡವನ್ನು ಇಡುತ್ತಾರೆ.

ಮುಂದಿನ ಹಂತವಾಗಿ ತುಂಬಿದ ಕೊಡದಲ್ಲಿ ಹೂಗಳನ್ನು ಪತ್ರೆಯನ್ನು ಹಾಕುತ್ತಾರೆ. ಆಮೇಲೆ ಸ್ನಾನಮಾಡಿ ಮಡಿ ಬಟ್ಟೆ ಧರಿಸಿದ ಅನೇಕ ಮಹಿಳೆಯರು ಬಂದು ಈ ಪೂಜಾ ಕಾರ್ಯದಲ್ಲಿ ತೊಡಗಿಕೊಳ್ಳುತ್ತಾರೆ. ಮೊದಲಿಗೆ ಒಬ್ಬಳು ಈ ತುಂಬಿದ ಕೊಡವನ್ನು ಪೂಜಿಸಿ ಆರತಿ ಮಾಡುತ್ತಾಳೆ. ಅನಂತರ ಉಳಿದೆಲ್ಲ ಮಹಿಳೆಯರೂ ಸೇರಿಕೊಂಡು ತಮ್ಮ ಬಲಗೈ ಯನ್ನು ಕೊಡದ ಅಂಚಿಗೆ ತಾಕಿಸಿ ಅದರ ಸುತ್ತಲೂ ನಿಂತುಕೊಳ್ಳುತ್ತಾರೆ.

ಆಮೇಲೆ ಎಲ್ಲರೂ ತಮ್ಮ ಎಡಗೈಯನ್ನು ಬೆನ್ನಮೇಲೆ ಹಿಡಿದುಕೊಂಡು ತುಂಬಿದ ಕೊಡದ ಸುತ್ತಲೂ ಹಾಡುಹೇಳುತ್ತ ತಿರುಗುತ್ತಾರೆ. ಹೀಗೆ ತಿರುಗುವಾಗ ತಿರುಗುವವರು ಮತ್ತು ಪಕ್ಕದಲ್ಲಿ ನಿಂತವರು ಎಲ್ಲರೂ ಸೇರಿ ಹಾಡು ಹೇಳುತ್ತಾರೆ. ಈ ಹಾಡುಗಳು ಮಳೆ ಮತ್ತು ಚಂದ್ರನಿಗೆ ಸಂಬಂಧಿಸಿರುತ್ತವೆ.[೭]

ಈ ರೀತಿ ಬಲಗೈಯನ್ನು ತಾಗಿಸಿ ಕೊಡದ ಸುತ್ತಲೂ ಸ್ತ್ರೀಯರು ಸುತ್ತುವಾಗ ಕೆಲವು ಸಮಯದ ನಂತರ ತುಂಬಿದ ಕೊಡವು ನಿಧಾನವಾಗಿ ತಿರುಗಲು ತೊಡಗುತ್ತದೆ. ಆಗ ಮಳೆಯು ಖಂಡಿತವಾಗಿ ಬರುತ್ತದೆ ಎಂದು ನಂಬುತ್ತಾರೆ. ಇಲ್ಲಿ ತುಂಬಿದ ಕೊಡವು ಸ್ತ್ರೀಯರ ಜೊತೆಗೆ ತಿರುಗಿದರೆ ಮಳೆ ಬರುತ್ತದೆ ಎಂದೂ, ಅದು ಕದಲದೇ ಇದ್ದರೆ ಮಳೆ ಬರುವುದಿಲ್ಲವೆಂತಲೂ ತಿಳಿಯುತ್ತಾರೆ. ಇಲ್ಲಿ ಕೊಡವು ತಿರುಗುವುದು ಒಂದು ವೈಜ್ಞಾನಿಕ ಕಾರಣದಿಂದಾಗಿ. ಮಹಿಳೆ ಯರು ಕೊಡದ ಅಂಚನ್ನು ಹಗುರವಾಗಿ ಮುಟ್ಟಿದ್ದರೂ ಸಹಿತ ಅವರು ತಿರುಗುವಾಗ ಅವರ ಮುಟ್ಟುವಿಕೆಯ ಬಲದಲ್ಲಿ ವ್ಯತ್ಯಾಸವಾಗುತ್ತದೆ. ಅಲ್ಲದೆ ಕೊಡದ ಕೆಳಗೆ ಇರುವ ಗುಂಡಾದ ಜೋಳದ ಕಾಳುಗಳು ಕೊಡದ ಚಲನೆಗೆ ಸಹಾಯ ಮಾಡುತ್ತದೆ. ಹಾಗಾಗಿ ಕೊಡವು ಚಲಿಸು ತ್ತದೆ. ಅದೇನೆ ಇದ್ದರೂ ಚಂದ್ರನ ಕುರಿತಾದ ಆಚರಣೆಯನ್ನು ತಿಳಿಸುವುದು ಇಲ್ಲಿ ಮುಖ್ಯ ವಾಗಿದೆ.

ಈ ಆಚರಣೆಯ ನಂತರ ತುಂಬಿದ ಕೊಡದ ನೀರು ಮತ್ತು ಪೂಜಾ ಸಾಮಗ್ರಿಗಳಾದ ಹೂ, ಕಾಯಿ, ಪತ್ರೆ, ಜೋಳ ಮುಂತಾದವುಗಳನ್ನು ಭಾವಿ ಇಲ್ಲವೆ ಕೆರೆಯಲ್ಲಿ ಬಿಡುತ್ತಾರೆ. ಮತ್ತು ಈ ಸಂದರ್ಭದಲ್ಲಿ ಬರೆಯಲಾದ ಬೆಳದಿಂಗಳ ಚಿತ್ರವನ್ನು ಹುಣ್ಣಿಮೆವರೆಗೂ ಉಳಿಸಿ ಕೊಳ್ಳುತ್ತಾರೆ. ನಂತರ ಹುಣ್ಣಿಮೆಯ ದಿನ ಹೋಳಿಗೆ, ಕಡಬು ಮುಂತಾದ ಭಕ್ಷ್ಯಗಳನ್ನು ಮಾಡಿ ಈ ಬೆಳದಿಂಗಳ ಚಿತ್ರಕ್ಕೆ ನೈವೇದ್ಯಮಾಡಿ ಆಚರಣೆ ಮುಕ್ತಾಯಗೊಳಿಸುತ್ತಾರೆ.

ಈ ಆಚರಣೆಯನ್ನು ಹುಣ್ಣಿಮೆಯು ಇನ್ನೂ ಮೂರು, ಎರಡು ಇಲ್ಲವೆ ಒಂದು ದಿನ ಇದೆ ಎನ್ನುವಾಗ ಪೂರ್ವದ ದಿನಗಳಲ್ಲಿನ ಸ್ವಚ್ಛ ಬೆಳದಿಂಗಳಲ್ಲಿ ಆಚರಿಸುತ್ತಾರೆ. ಇಲ್ಲಿ ಕುತೂಹಲದ ವಿಚಾರವೆಂದರೆ, ಈ ಆಚರಣೆ ಅಂದರೆ ಮಳೆ ಕೇಳುವ ಆಚರಣೆಯನ್ನು ಎಂದು ಮಾಡಬೇಕೆಂದು ಸಭೆ ಕೂಡಿ ನಿರ್ಧರಿಸುವವರು ಗಂಡಸರು. ಆದರೆ ದಿನ ನಿರ್ಧರಿಸಿ ಆಚರಣೆಯನ್ನು ಮಾಡಲು ಮಹಿಳೆಯರಿಗೆ ಹೇಳುತ್ತಾರೆ. ಅನಂತರದ ಎಲ್ಲ ಕೆಲಸವೂ ಮಹಿಳೆಯರಿಂದ ಜರುಗುತ್ತದೆ. ಈ ಪದ್ಧತಿಯು ಇತ್ತೀಚೆಗೆ ಕಣ್ಮರೆಯಾಗುತ್ತಿದೆ.

೨. ಸ್ವರೂಪ

ಬೆಳದಿಂಗಳ ಚಿತ್ರವಿನ್ಯಾಸಗಳು ದ್ವಿ ಆಯಾಮವನ್ನು ಹೊಂದಿರುತ್ತವೆ. ಮನೆಯಬಾಗಿಲು ಮುಂದಿನ ನೆಲದಲ್ಲಿ, ಅಂದರೆ ಪ್ರತಿದಿನ ರಂಗವಲ್ಲಿ ಹಾಕುವ ಸ್ಥಳದಲ್ಲಿ ಸಾರಿಸಿ ಚಿತ್ರಿಸಲಾಗಿ ರುತ್ತದೆ. ಕೆಲವರು ಆ ಸ್ಥಳವನ್ನು ಹಾಗೇ ಬಿಟ್ಟು ಅದರ ಅಕ್ಕಪಕ್ಕದಲ್ಲಿ ಬೆಳದಿಂಗಳು ಹೊಯ್ಯುತ್ತಾರೆ. ಮತ್ತೆ ಕೆಲವರು ಮರದ ಹಲಗೆಯ ಕೂಡುವ ಮಣೆಗಳನ್ನು ಬೆಳದಿಂಗಳ ಚಿತ್ರ ಬರೆಯಲು ಉಪಯೋಗಿಸುವರು. ಇನ್ನೂ ಹಲವರು ಮನೆಯ ಬಾಗಿಲಿನ ಅಕ್ಕಪಕ್ಕದ ಗೋಡೆಯ ಮೇಲೆ ಬೆಳದಿಂಗಳು ಹೊಯ್ಯುತ್ತಾರೆ. ಹೀಗೆ ವಿವಿಧ ಬಗೆಯ ಸ್ವರೂಪದಿಂದ ಬೆಳದಿಂಗಳು ಚಿತ್ರವಿನ್ಯಾಸ ರಚನೆಯಾಗುತ್ತದೆ.

ಬೆಳದಿಂಗಳು ಪೂಜೆ ಮತ್ತು ಆ ಸಂದರ್ಭದ ಚಿತ್ರ ಬರೆಯಲು ಮಹಿಳೆಯರು ಸ್ನಾನ ಮಾಡಿ ಮಡಿ ಬಟ್ಟೆಗಳನ್ನು ತೊಟ್ಟುಕೊಂಡು, ಅನೇಕ ಪರಿಕರಗಳನ್ನು ಬಳಸಿಕೊಂಡು ಚಿತ್ರ ರಚನೆ ಮಡುತ್ತಾರೆ.

ಇಂತಹ ಪರಿಕರಗಳಲ್ಲಿ ಸ್ಥಳೀಯವಾಗಿ ಮತ್ತು ತಕ್ಷಣಕ್ಕೆ ಲಭ್ಯವಾಗುವ ವಸ್ತುಗಳಿಗೆ ಹೆಚ್ಚು ಆಧ್ಯತೆ ಕೊಡುತ್ತಾರೆ. ಬೆಳದಿಂಗಳ ಚಿತ್ರರಚನೆಯ ಪರಿಕರಗಳನ್ನು ಸ್ಥೂಲವಾಗಿ ಈ ಕೆಳಗಿನಂತೆ ಗಮನಿಸಬಹುದು.

೩. ಪರಿಕರಗಳು

ಚಿತ್ರಶಿಲ್ಪ ಹೀಗೆ ಯಾವುದೇ ಕಲಾಕೃತಿ ರೂಪುಗೊಳ್ಳಲೂ ಸಹಿತ ಬೇರೆ ಬೇರೆ ರೀತಿಯ ಪರಿಕರಗಳು ಬೇಕಾಗುತ್ತವೆ. ಬೆಳದಿಂಗಳಪ್ಪನ ಪೂಜೆಯ ಆಚರಣೆಯ ಸಂದರ್ಭದಲ್ಲಿ

ಬರೆಯಲಾಗುವ ಚಿತ್ರಕಲೆಗೂ ಸಹಿತ ವಿವಿಧ ಬಗೆಯ ಪರಿಕರಗಳು ಬೇಕಾಗುತ್ತವೆ. ಅವು ಗಳಲ್ಲಿ ಪ್ರಮುಖವಾಗಿ ಚಿತ್ರ ರಚನೆ ಮಾಡಲು ಬೇಕಾಗುವ ಬಣ್ಣ, ಕುಂಚ, ಬಣ್ಣ ಕಲಸಿ ಕೊಳ್ಳುವ ತಟ್ಟೆಗಳಲ್ಲದೆ ಚಿತ್ರವಿನ್ಯಾಸವನ್ನು ಬೇಕಾದ ಆಕಾರಕ್ಕೆ ರೂಪಿಸಲು ಸಹಾಯಕ ವಾಗುವ ಬಟ್ಟಲು, ಎಲೆ, ದಾರ ಮುಂತಾದವುಗಳು ಸೇರಿವೆ.

ಮೊದಲಿಗೆ ಚಿತ್ರ ಬರೆಯಲು ಬೇಕಾಗುವ ಪರಿಕರಗಳನ್ನು ಕುರಿತು ನೋಡಬಹುದು. ಯಾವುದೇ ಚಿತ್ರದ ಸೊಬಗು ಅದರ ಬಣ್ಣಗಾರಿಕೆಯಲ್ಲಿ ಕಂಡು ಬರುತ್ತದೆ. ಇಲ್ಲಿ ಬಣ್ಣಕ್ಕಾಗಿ ಸುಣ್ಣ ಮತ್ತು ಕೆಮ್ಮಣ್ಣುಗಳನ್ನು ಉಪಯೋಗಿಸುತ್ತಾರೆ. ಹದವಾಗಿ ಮತ್ತು ಮಂದ ದ್ರಾವಣ ದಂತೆ ಸುಣ್ಣವನ್ನು ಕಲಸಿಕೊಂಡು ಚಿತ್ರಿಸುತ್ತಾರೆ.

ಹೆಚ್ಚಾಗಿ ಸಗಣಿ ಸಾರಿಸಿದ ಗೋಡೆ ಮತ್ತು ನೆಲದ ಮೇಲೆ ಸುಣ್ಣದಿಂದಲೇ ಬೆಳದಿಂಗಳ ಚಿತ್ರ ರಚಿಸುತ್ತಾರಾದರೂ ಕೆರೂರು, ರಾಮದುರ್ಗ, ಗುಳೇದಗುಡ್ಡ ಹೀಗೆ ಕೆಲವು ಪ್ರದೇಶ ಗಳಲ್ಲಿ ಸುಣ್ಣದ ಗೋಡೆಯಮೇಲೆ ಕೆಮ್ಮಣ್ಣಿನಿಂದಲೂ ಬೆಳದಿಂಗಳ ಚಿತ್ರ ರಚಿಸುತ್ತಾರೆ.

ಮೊದಲಿಗೆ ಕೆಮ್ಮಣ್ಣಿನ ಗಟ್ಟಿಗಳನ್ನು ಕುಟ್ಟಿ ಪುಡಿಮಾಡಿ ಅರಿವೆಯಲ್ಲಿ ಸೋಸಿ ಆ ಪುಡಿಯನ್ನು ಪಾತ್ರೆಯಲ್ಲಿ ಸಂಗ್ರಹಿಸಿಕೊಳ್ಳುತ್ತಾರೆ. ಆಮೇಲೆ ಅದಕ್ಕೆ ನೀರು ಸ್ವಲ್ಪ ಪ್ರಮಾಣದ ಅಂಟು ಪದಾರ್ಥ ಕೂಡಿಸಿ ಒಂದುದಿನ ನೆನೆಯಲು ಬಿಡುತ್ತಾರೆ. ಅದು ಚೆನ್ನಾಗಿ ನೆನೆದು ಹದವಾದ ದ್ರಾವಣವಾದಾಗ ಚೆನ್ನಾಗಿ ಕಲಕಿ ಉಪಯೋಗಿಸುತ್ತಾರೆ.

ವರ್ಣದ್ರವ್ಯದಿಂದ ಚಿತ್ರರೂಪಿಸಲು ರೋಮಭರಿತ, ಇಲ್ಲವೆ ನಾರಿನ ಎಳೆಗಳಿಂದ ಕೂಡಿ ದಂತಹ ಕುಂಚಗಳನ್ನು ಇಲ್ಲಿ ಉಪಯೋಗಿಸುವುದಿಲ್ಲ. ಅದರ ಬದಲಾಗಿ ದೀಪದ ಕಡ್ಡಿ, ತೊಗರಿ ಕಡ್ಡಿ, ಪುಂಡಿ ಕಡ್ಡಿ, ಗಲಗಿನ ತುಂಡು, ಇಲ್ಲವೆ ತೆಳುವಾದ ದಂಟನ್ನು ಉಪಯೋಗಿ ಸುತ್ತಾರೆ. ಮತ್ತೆ ಕೆಲವರು ಕೈ ಬೆರಳಿನಿಂದಲೇ ಚಿತ್ರಿಸುವರು.

ಬಣ್ಣ ಕಲಸಿಕೊಳ್ಳಲು ವಿವಿಧ ಬಗೆಯ ವಸ್ತುಗಳನ್ನು ಉಪಯೋಗಿಸುವರು. ಮಣ್ಣಿನ ಪಾತ್ರೆ, ತೆಂಗಿನ ಚಿಪ್ಪು, ಲೋಹದ ಪಾತ್ರೆಗಳು ಇಲ್ಲಿ ಈ ಉದ್ದೇಶಕ್ಕೆ ಬಳಸಲ್ಪಡುತ್ತವೆ. ಇದರಲ್ಲಿ ಹೆಚ್ಚಾಗಿ ಮಣ್ಣಿನ ಪಾತ್ರೆ ಮತ್ತು ಟೆಂಗಿನ ಚಿಪ್ಪುಗಳೇ ವಿಶೇಷವಾಗಿ ಬಳಸಲ್ಪಡು ತ್ತವೆ. ಮಣ್ಣಿನ ಪಾತ್ರೆಯಲ್ಲಿ ಚಿಕ್ಕದಾದ ಕುಡಿಕೆ, ಇಲ್ಲವೆ ಮುಚ್ಚಳದಂತಹ ವಿನ್ಯಾಸದ ಪಾತ್ರೆಗಳನ್ನೆ ಹೆಚ್ಚಾಗಿ ಉಪಯೋಗಿಸುತ್ತಾರೆ.

ಇನ್ನು ಚಿತ್ರ ವಿನ್ಯಾಸವನ್ನು ಬೇಕಾದ ಆಕಾರಕ್ಕೆ ರೂಪಿಸಿಕೊಳ್ಳಲು ಉಪಯೋಗಿಸಲ್ಪಡುವ ಪರಿಕರಗಳು ಪ್ರದೇಶದಿಂದ ಪ್ರದೇಶಕ್ಕೆ ಮತ್ತು ದಿನದಿಂದ ದಿನಕ್ಕೆ ಬದಲಾಗುತ್ತವೆ. ಅವು ಗಳನ್ನು ಸಾಮಾನ್ಯ ಅರ್ಥದಲ್ಲಿ ಈ ಕೆಳಗಿನಂತೆ ವಿವರಿಸಬಹುದು. ಬೆಳದಿಂಗಳು ಬರೆಯುವ ಐದು ದಿನಗಳ: ಬಳಕೆಯಾಗುವ ಪ್ರತಿದಿನದ ಪರಿಕರಗಳು ಹೀಗಿವೆ.

ಮೊದಲನೆಯ ದಿನ : ಮೊದಲನೆಯ ದಿನ 'ತಳಕು ಬಟ್ಟಲು' ಚಿತ್ರಿಸುತ್ತಾರೆ. ಅಂದರೆ ಒಂದು ದೊಡ್ಡ ವೃತ್ತವನ್ನು ಮತ್ತು ಅದರೊಳಗೆ ಸಣ್ಣ ವೃತ್ತವನ್ನು ಚಿತ್ರಿಸುವರು. ಇದನ್ನೇ ತಳುಕು ಬಟ್ಟಲು ಇಲ್ಲವೆ ಬಟ್ಟಲು ಚಿತ್ರಿಸುವುದು ಎನ್ನುತ್ತಾರೆ. ಇದನ್ನು ಚಿತ್ರಿಸಲು ಜನಪದರು ಒಂದು ದೊಡ್ಡದು ಇನ್ನೊಂದು ಚಿಕ್ಕದು ಹೀಗೆ ಭಿನ್ನ ಅಳತೆಯ ಬಟ್ಟಲು ಅಥವಾ ಊಟದ ತಟ್ಟೆಗಳನ್ನೇ ಬಳಸುತ್ತಾರೆ.

ಕೆಲವರು ಇದಕ್ಕಾಗಿ ಭಿನ್ನ ಅಳತೆಯ ಬೋಗುಣಿ(ಡಬರಿ)ಗಳನ್ನು ಉಪಯೋಗಿಸುತ್ತಾರೆ. ಮೊದಲಿಗೆ ದೊಡ್ಡ ಅಳತೆಯ ತಟ್ಟೆ ಅಥವಾ ಬೋಗುಣಿ ಇಟ್ಟು ಅದರ ಸುತ್ತಲೂ ಸುಣ್ಣದ ದ್ರಾವಣದಿಂದ ಕಡ್ಡಿಯನ್ನು ಬಳಸಿ ಸಾಲಾಗಿ ಚುಕ್ಕೆಗಳನ್ನು ಇಡುತ್ತ ಹೋಗುತ್ತಾರೆ. ನಂತರ ಇದೇ ರೀತಿ ಚಿಕ್ಕ ಬಟ್ಟಲು ಇಟ್ಟು ಚಿತ್ರಿಸುವರು. ಒಂದೇ ಅಳತೆಯ ಈ ಚುಕ್ಕೆಗಳು ಮುತ್ತು ಪೋಣಿಸಿದಂತೆ ಅಂದವಾಗಿ ಕಂಗೊಳಿಸುತ್ತವೆ.

ಎರಡನೆಯ ದಿನ : ಎರಡನೆಯ ದಿನ ಕೊಳಲಬಾವಿ, ಇಲ್ಲವೆ ರಾಮನ ತೊಟ್ಟಿಲು ಚಿತ್ರಿಸುವರು. ಇವೆರಡೂ ವಿನ್ಯಾಸಗಳು ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಒಂದೇ ತೆರನಾದ ಆಕಾರದಿಂದ ಕೂಡಿವೆ. ಆಯತ, ಚೌಕಗಳಿಂದ ರೂಪಿತವಾದ ಈ ಆಕಾರಗಳನ್ನು ಚಿತ್ರಿಸಲು ಜನಪದರು ಒಂದೇ ಅಳತೆಯ ಎರಡು ಮೂರು ಬಗೆಯ ಕಡ್ಡಿಗಳನ್ನು ಉಪಯೋಗಿಸುತ್ತಾರೆ. ಮತ್ತೆ ಕೆಲವರು ತಂತಿ, ಇಲ್ಲವೆ ಕಬ್ಬಿಣದ ಚಿಕ್ಕ ಸಲಾಕೆ ತುಂಡುಗಳನ್ನು ಬಳಸುತ್ತಾರೆ. ಮತ್ತೂ ಕೆಲವರು ಹಗ್ಗ ಇಲ್ಲವೆ ದಪ್ಪನಾದ ದಾರವನ್ನು ಬಳಸುವರು.

ಮೊದಲಿಗೆ ತಮಗೆ ಬೇಕಾದ ಹಾಗೆ ಕೊಳಲಬಾವಿ ಇಲ್ಲವೆ ರಾಮನ ತೊಟ್ಟಿಲು ಆಕಾರಗಳನ್ನು ಮೇಲೆ ಹೇಳಲಾದ ವಸ್ತು ಗಳಿಂದ ರೂಪಿಸಿಕೊಂಡು ಆ ವಿನ್ಯಾಸದ ಸುತ್ತಲೂ ಸುಣ್ಣದ ಚುಕ್ಕೆಗಳನ್ನು ಇಡುತ್ತ ಹೋಗುತ್ತಾರೆ. ಸುಣ್ಣದ ಚುಕ್ಕೆಗಳನ್ನು ಇಡುವ ಕ್ರಿಯೆ ಮುಗಿದ ನಂತರ ಅತ್ಯಂತ ಜಾಗ್ರತೆಯಾಗಿ, ಪಕ್ಕದ ಚುಕ್ಕೆಗಳಿಗೆ ತಾಗದಂತೆ ಕಡ್ಡಿ ಇಲ್ಲವೆ ದಾರವನ್ನು ಎತ್ತಿಕೊಳ್ಳುತ್ತಾರೆ.

ಮೂರನೆಯ ದಿನ : ಮೂರನೆಯ ದಿನ ಎಲೆ ಬಳ್ಳಿಯನ್ನು ಚಿತ್ರಿಸುವರು. ಇದಕ್ಕಾಗಿ ಬೇರೆ ಬೇರೆ ಗಿಡದ ಎಲೆಗಳನ್ನು ಬಳಸುತ್ತಾರೆ. ಎಲೆಯನ್ನು ಇಟ್ಟು ಅದರ ಸುತ್ತಲೂ ಹೊರ ರೇಖೆಗುಂಟ ಸುಣ್ಣದ ಚುಕ್ಕೆಗಳನ್ನು ಇಡುತ್ತಾರೆ. ನಂತರ ಜಾಗ್ರತೆಯಿಂದ ಎಲೆಯನ್ನು ಮೇಲೆತ್ತಿದಾಗ ಅದೇ ಎಲೆಯ ಯಥಾರೂಪ ಮೂಡಿರುತ್ತದೆ. ಈ ಎಲೆಗಳನ್ನು ಬಳ್ಳಿಯಂತೆ ಹೊಂದಿಸಿ ಒಂದರಿಂದ ಐದು ಇಲ್ಲವೆ ಏಳುಸಾಲುಗಳಲ್ಲಿ ಚಿತ್ರಿಸುವರು. ಇದಕ್ಕಾಗಿ ಸುಂದರವಾಗಿರುವ ಮಲ್ಲಿಗೆ, ದಾಸವಾಳ, ಲಿಂಬೆ, ಹಾಗೂ ಇನ್ನಿತರ ಎಲೆಗಳನ್ನು ಬಳಸುತ್ತಾರೆ. ಮತ್ತೆ ಕೆಲವರು ದಪ್ಪನಾದ ಕಾಗದ ಇಲ್ಲವೆ ರಟ್ಟಿನಲ್ಲಿ ಎಲೆಯ ಆಕಾರವನ್ನು ಚಿತ್ರಿಸಿ

ಅದನ್ನು ಕತ್ತರಿಸಿಕೊಂಡು ಅದರಿಂದ ಬೆಳದಿಂಗಳು ಬರೆಯುತ್ತಾರೆ. ಈ ವಿಧಾನದಿಂದ ಒಂದು ಪ್ರಯೋಜನವೆಂದರೆ, ಕಟ್ಟು ಇಲ್ಲವೆ ದಪ್ಪನಾದ ಕಾಗದದಲ್ಲಿ ರೂಪಿಸಿಕೊಂಡ ಎಲೆಯ ಆಕಾರಕ್ಕೆ ಮಧ್ಯಭಾಗದಲ್ಲಿ ಹಿಡಿಕೆಯನ್ನು ನಿರ್ಮಿಸಿರುತ್ತಾರೆ. ಈ ಹಿಡಿಕೆಯ ಸಾಧನವು ಪಕ್ಕದಲ್ಲಿನ ಸುಣ್ಣದ ಚುಕ್ಕೆಗಳಿಗೆ ತಾಗದಂತೆ ಎಲೆಯನ್ನು ಎತ್ತಲು ಸಹಕಾರಿಯಾಗಿದೆ.

ನಾಲ್ಕನೆಯ ದಿನ : ನಾಲ್ಕನೆಯದಿನ 'ಹುಚ್ಚಯ್ಯ'ನನ್ನು ಚಿತ್ರಿಸುತ್ತಾರೆ. ಇದು ಚಿಕ್ಕ ಪ್ರಮಾಣದ ತೇರು ಎಂದು ಹೇಳಬಹುದು. ಗೋಪುರದಂತಹ ವಿನ್ಯಾಸ ಅದರ ಸುತ್ತಲೂ ಎಲೆ ಇಲ್ಲವೆ ಗೋಡಂಬಿ ಆಕಾರದ ಹೊರೆ ಅಂಚುಗಳನ್ನು ಇಲ್ಲಿ ಚಿತ್ರಿಸುವರು. ಇದಕ್ಕೆ ಬೇಕಾಗುವ ಪರಿಕರಗಳಲ್ಲಿ ಪ್ರಮುಖವಾಗಿ ಹಗ್ಗ ಅಥವಾ ದಾರ, ರಟ್ಟು ಅಥವಾ ದಪ್ಪನಾದ ಹಾಳೆ ಇಲ್ಲವೆ ಎಲೆಯನ್ನು ಹೆಸರಿಸಬಹುದು.

ಮೊದಲಿಗೆ ದಾರ ಇಲ್ಲವೆ ಹಗ್ಗದಿಂದ ಗೋಪುರದ ಆಕಾರವನ್ನು ಮಾಡಿಕೊಂಡು ಅದರ ಸುತ್ತಲೂ ಗೋಡಂಬಿಯಾಕಾರದ ವಿನ್ಯಾಸಗಳನ್ನು ಇಲ್ಲವೆ ಎಲೆಗಳನ್ನು ಇಟ್ಟು ಹುಚ್ಚಯ್ಯನನ್ನು ರೂಪಿಸುತ್ತಾರೆ. ನಂತರ ಇಡೀ ಚಿತ್ರವಿನ್ಯಾಸದ ಸುತ್ತಲೂ ಸುಣ್ಣದ ಚುಕ್ಕೆ ಇಟ್ಟು ಚಿತ್ರ ಪೂರ್ತಿಗೊಳಿಸುವರು. ಇಲ್ಲಿ ಹುಚ್ಚಯ್ಯನ ಗಾಲಿಗಳನ್ನು ಚಿತ್ರಿಸಲು ದುಂಡಾದ ಚಿಕ್ಕ ಬಟ್ಟಲು, ಮುಚ್ಚಳ ಇಲ್ಲವೆ ದೊಡ್ಡ ಬಾಟಲಿಯ ಮುಚ್ಚಳಗಳನ್ನು ಬಳಸುತ್ತಾರೆ.

ಐದನೆಯ ದಿನ : ಐದನೆಯದಿನ ತೇರನ್ನು ಚಿತ್ರಿಸಲಾಗುತ್ತಿದ್ದು ಇದಕ್ಕೆ ಈ ಹಿಂದಿನ ದಿನಗಳಲ್ಲಿ ಉಪಯೋಗಿಸಲಾದ ಪರಿಕರಗಳನ್ನೇ ಉಪಯೋಗಿಸುವರು. ತೇರಿನ ಮಧ್ಯ ಭಾಗದ ಚೌರಸವನ್ನು ಚಿತ್ರಿಸಲು ಕಡ್ಡಿಗಳನ್ನು ಬಳಸಿದರೆ, ಮೇಲಿನ ಗೋಪುರ, ಕಳಸ, ತೇರಿನ ಹಗ್ಗಗಳನ್ನು ಚಿತ್ರಿಸಲು ದಾರವನ್ನು ಉಪಯೋಗಿಸುವರು.

ತೇರಿನ ಮೇಲ್ಭಾಗದ ಅಲಂಕರಣ, ಪ್ರಭಾವಳಿ, ಧ್ವಜ ಮುಂತಾದವುಗಳನ್ನು ಚಿತ್ರಿಸಲು ರಟ್ಟು, ದಪ್ಪಹಾಳೆ, ಅವುಗಳಲ್ಲಿ ಕತ್ತರಿಸಿದ ಗೋಡಂಬಿ, ಎಲೆ ಆಕಾರಗಳನ್ನು ಬಳಸಿದರೆ, ಗಾಲಿಗಳನ್ನು ಚಿತ್ರಿಸಲು ಬಟ್ಟಲುಗಳನ್ನು ಉಪಯೋಗಿಸುವರು. ಹೀಗೆ ಐದೂ ದಿನಗಳಲ್ಲಿ ಬಳಕೆಯಾದ ಪರಿಕರಗಳು ಇಲ್ಲಿ ಒಟ್ಟಾಗಿ ಉಪಯೋಗಿಸಲ್ಪಡುತ್ತವೆ.

೪. ರಚನಾ ವಿಧಾನ

ಬೆಳದಿಂಗಳ ಚಿತ್ರಕಲೆಯ ರಚನಾ ವಿಧಾನದಲ್ಲಿ ಬಣ್ಣಗಳನ್ನು ಸಿದ್ಧಗೊಳಿಸಿಕೊಳ್ಳುವುದು, ಕುಂಚಗಳನ್ನು ತಯಾರಿಸಿಕೊಳ್ಳುವುದು ನಂತರ ಚಿತ್ರ ರಚನಾ ಸ್ಥಳವನ್ನು ಗುಡಿಸಿ, ಸಾರಿಸಿ ಸಿದ್ಧ ಗೊಳಿಸುವಂತಹ ಕ್ರಿಯೆಗಳೆಲ್ಲವೂ ಒಳಗೊಳ್ಳುತ್ತವೆ. ಹಾಗಾಗಿ ಒಟ್ಟು ರಚನಾ ವಿಧಾನವನ್ನು 'ಸಿದ್ಧತಾ ಹಂತ' ಮತ್ತು 'ಚಿತ್ರರಚನಾ ಹಂತ' ಎಂಬುದಾಗಿ ವಿಂಗಡಿಸಬಹುದಾಗಿದೆ.

ಅ. ಸಿದ್ಧತಾ ಹಂತ

ಈ ಹಂತದಲ್ಲಿ ಚಿತ್ರರಚನೆಗೆ ಪೂರ್ವದಲ್ಲಿ ವರ್ಣ ತಯಾರಿಸುವುದು ಕುಂಚಗಳನ್ನು ನಿರ್ಮಿಸಿಕೊಳ್ಳುವುದು, ಚಿತ್ರರಚನಾ ಸ್ಥಳವನ್ನು ಗುಡಿಸಿ ಸಾರಿಸುವಂತಹ ಕೆಲಸಗಳು ನಡೆಯುತ್ತವೆ. ಚಿತ್ರರಚನೆಗಾಗಿ ಎಲ್ಲವನ್ನೂ ಸಿದ್ಧಗೊಳಿಸುವ ಕ್ರಿಯೆ ಇಲ್ಲಿ ನಡೆಯುವುದರಿಂದ ಇದನ್ನು ಸಿದ್ಧತಾ ಹಂತ ಎಂಬುದಾಗಿ ಹೇಳಬಹುದು.

ಬಣ್ಣತಯಾರಿಕೆ : ಬೆಳದಿಂಗಳು ಚಿತ್ರರಚನೆಯಲ್ಲಿ ಪ್ರಮುಖವಾಗಿ ಉಪಯೋಗಿಸುವ ಬಣ್ಣದ ಮಾಧ್ಯಮವೆಂದರೆ, ಸುಣ್ಣವಾಗಿದೆ. ಕೆಲವರು ಹುಣ್ಣಿಮೆಯ ದಿವಸ ಕೆಂಪು ಹುರಿ ಮಂಜನ್ನೂ ಚಿತ್ರ ರಚನೆಗೆ ಬಳಸುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ಸುಣ್ಣದ ಜೊತೆಗೆ ಅಕ್ಕಿ ಹಿಟ್ಟು, ಅಕ್ಕಿಗಂಜಿ, ರಾಗಿಹಿಟ್ಟುಗಳನ್ನೂ ಉಪಯೋಗಿಸುತ್ತಾರೆ. ಇವುಗಳ ಬಗ್ಗೆ ಸ್ಥೂಲವಾಗಿ ಗಮನಿಸಬಹುದು.

ಸುಣ್ಣ : ಸುಣ್ಣದ ಹರಳುಗಳನ್ನು ಬಿಸಿ ನೀರಿನಲ್ಲಿ ಹಾಕಿ ಕುದಿಸುತ್ತಾರೆ. ಒಂದು ದಿನದ ನಂತರ ಬೆಣ್ಣೆಯಂತೆ ಆಗಿರುವ ಸುಣ್ಣವನ್ನು ಬೇಕಾದಷ್ಟು ಪ್ರಮಾಣದಲ್ಲಿ ನೀರು ಹಾಕಿಕೊಂಡು ತೆಂಗಿನ ಚಿಪ್ಪು ಇಲ್ಲವೆ ಪಾತ್ರೆಯಲ್ಲಿ ಕಲಸಿಕೊಳ್ಳುತ್ತಾರೆ. ಮಂದವಾದ ಈ ದ್ರಾವಣದಿಂದ ಚಿತ್ರ ಬರೆಯುತ್ತಾರೆ.

ಹುರಿಮಂಜು : ಇದು ಕೆಂಪು ಮಣ್ಣಿನ ಗಟ್ಟಿಯಾಗಿದೆ. ಇದನ್ನು ಮೊದಲು ಕುಟ್ಟಿ ಪುಡಿ ಮಾಡಿ ಅರಿವೆಯಲ್ಲಿ ಸೋಸಿಕೊಳ್ಳುತ್ತಾರೆ. ಆಮೇಲೆ ನೀರುಹಾಕಿ ಒಂದು ಪಾತ್ರೆಯಲ್ಲಿಟ್ಟು ಒಂದು ದಿನ ಬಿಡುತ್ತಾರೆ. ಇದರಿಂದ ಚೆನ್ನಾಗಿ ನೆನೆದು ಮಂದವಾದ ದ್ರಾವಣವಾಗುತ್ತದೆ. ಅದಕ್ಕೆ ತಕ್ಕ ಪ್ರಮಾಣದಲ್ಲಿ ನೀರು ಬೆರೆಸಿಕೊಂಡು ಉಪಯೋಗಿ ಸುತ್ತಾರೆ.

ಅಕ್ಕಿಹಿಟ್ಟು : ಅಕ್ಕಿಯನ್ನು ಬೀಸಿ ಹಿಟ್ಟು ಮಾಡಿಕೊಳ್ಳುತ್ತಾರೆ. ಅದನ್ನು ನೀರಿನಲ್ಲಿ ಹಾಕಿ ಬೆಂಕಿಯ ಮೇಲಿಟ್ಟು ಕುದಿಸಿ ಗಂಜಿ ತಯಾರಿಸಿಕೊಳ್ಳುತ್ತಾರೆ. ಈ ಗಂಜಿಯನ್ನೇ ಚಿತ್ರರಚನೆಗೆ ಉಪಯೋಗಿಸುವರು.

ರಾಗಿ ಹಿಟ್ಟು : ರಾಗಿಯನ್ನು ನೀರಿನಲ್ಲಿ ನೆನೆಹಾಕಿ ನಂತರ ನೆರಳಿನಲ್ಲಿ ಒಣಗಿಸುತ್ತಾರೆ. ಆಮೇಲೆ ಈ ಒಣಗಿದ ರಾಗಿಯನ್ನು ಬೀಸಿ ಹಿಟ್ಟು ಮಾಡಿಕೊಳ್ಳುತ್ತಾರೆ. ಈ ಹಿಟ್ಟನ್ನು ಬಟ್ಟೆಯ ಮೂಲಕ ಸೋಸಿ, ಇಲ್ಲವೆ ಮೊರದಲ್ಲಿ ಹಾಕಿ ಕೇರುವ ಮೂಲಕ ರಾಗಿಯ ಹೊಟ್ಟನ್ನು ಬೇರ್ಪಡಿಸುತ್ತಾರೆ. ಆಗ ಸ್ವಚ್ಛವಾದ ಬಿಳಿದಾದ ಹಿಟ್ಟು ದೊರಕುತ್ತದೆ. ಅದನ್ನು ಪಾತ್ರೆಯಲ್ಲಿ ಹಾಕಿ ತಕ್ಕ ಪ್ರಮಾಣದ ನೀರು ಬೆರೆಸಿ, ಒಲೆಯ ಮೇಲಿಟ್ಟು ಕುದಿಸುತ್ತಾರೆ. ಇದು ಗಂಜಿಯ ರೂಪ ತಾಳಿದಾಗ ಅದನ್ನು ಚಿತ್ರಕ್ಕೆ ಉಪಯೋಗಿಸುವರು. ಕೆಲವರು ಒಣದಾದ ಹಿಟ್ಟನ್ನೇ ಚಿತ್ರವಿನ್ಯಾಸದಲ್ಲಿ ತುಂಬುತ್ತಾರೆ.

ಕುಂಚಗಳನ್ನು ವಿವಿಧ ಬಗೆಯ ಕಡ್ಡಿಗಳನ್ನು ಕೆತ್ತಿ ತುದಿಯನ್ನು ಮೊನಚುಮಾಡಿಕೊಳ್ಳುವ ಮೂಲಕ ತಯಾರಿಸಿಕೊಳ್ಳುತ್ತಾರೆ. ಕೆಲವರು ಕಡ್ಡಿಗೆ ಹತ್ತಿ, ದಾರ, ಇಲ್ಲವೆ ಅರಿವೆಯನ್ನು ಸುತ್ತಿ ಕುಂಚ ಮಾಡಿಕೊಳ್ಳುವರು.

ಚಿತ್ರರಚನಾ ಸ್ಥಳವನ್ನು ಸಿದ್ಧಗೊಳಿಸುವುದು : ಬೆಳದಿಂಗಳು ಚಿತ್ರ ವಿನ್ಯಾಸ ಬರೆಯುವ ಪೂರ್ವದಲ್ಲಿ ಆ ಸ್ಥಳವನ್ನು ಶುದ್ಧಗೊಳಿಸಿ ನಂತರ ಚಿತ್ರ ರಚನೆ ಮಾಡುತ್ತಾರೆ. ಮನೆಯ ಬಾಗಿಲಿನ ಎದುರಿಗೆ ನೆಲದ ಮೇಲೆ, ಬಾಗಿಲಿನ ಪಕ್ಕದ ಗೋಡೆಗಳ ಮೇಲೆ, ಇಲ್ಲವೆ ಕೂಡ್ರುವ ಕಟ್ಟೆಗೆಯ ಮಣೆಯ ಮೇಲೆ ಬೆಳದಿಂಗಳನ್ನು ಹೊಯ್ಯುತ್ತಾರೆ.

ನೆಲದ ಮೇಲೆ ಬೆಳದಿಂಗಳು ಹೊಯ್ಯುವುದಕ್ಕಿಂತ ಮೊದಲು ಆ ಸ್ಥಳವನ್ನು ಚೆನ್ನಾಗಿ ಗುಡಿಸಿ, ನೀರು ಚಿಮುಕಿಸಿ, ನಂತರ ಆಕಳ ಸಗಣಿ ಸಾರಿಸುತ್ತಾರೆ. ಆಮೇಲೆ ಚಿತ್ರ ರಚಿಸಲಾಗುವುದು. ಕಟ್ಟಿಗೆಯ ಮಣೆಯ ಮೇಲೆ ಬೆಳದಿಂಗಳು ಹೊಯ್ಯುವವರು ಅದನ್ನು ಚೆನ್ನಾಗಿ ತೊಳೆದು ಒಣಗಿಸಿ ಅದರ ಮೇಲೆ ಚಿತ್ರಿಸುತ್ತಾರೆ.

ಇನ್ನು ಗೋಡೆಯ ಮೇಲೆ ಬೆಳದಿಂಗಳು ಚಿತ್ರಿಸುವವರು ಮೊದಲಿಗೆ ಗೋಡೆಯನ್ನು ಸಗಣಿ, ಜೇಡಿಮಣ್ಣುಗಳಿಂದ ಮೆತ್ತಿ ಸಮತಲಗೊಳಿಸಿ ಅದರ ಮೇಲೆ ಸುಣ್ಣ ಇಲ್ಲವೆ ಸಗಣಿಯನ್ನು ಸಾರಿಸಿ ನಂತರ ಚಿತ್ರಬರೆಯುತ್ತಾರೆ. ಹೀಗೆ ಚಿತ್ರ ಬರೆಯುವ ಸ್ಥಳವನ್ನು ವಿವಿಧ ರೀತಿಯಿಂದ ಸಿದ್ಧಗೊಳಿಸಿಕೊಂಡನಂತರ ಇಲ್ಲಿಂದ ಮುಂದೆ ಚಿತ್ರರಚನಾ ಹಂತವು ಪ್ರಾರಂಭಗೊಳ್ಳುತ್ತದೆ.

ಬ. ಚಿತ್ರರಚನಾ ಹಂತ

ಇಲ್ಲಿ ಆಯಾ ದಿನಗಳು ನಿರ್ಧಿಷ್ಟ ಪಡಿಸಿದ ಚಿತ್ರಗಳನ್ನು ಬರೆಯುತ್ತಾರೆ. ಅದಕ್ಕಾಗಿ ಸಂಬಂಧಿಸಿದ ವಸ್ತುಗಳನ್ನು ಸಹಿತ ಬಳಸುತ್ತಾರೆ. ಮೊದಲದಿನದ ತಳಕು ಬಟ್ಟಲು ಮತ್ತು ತೇರು ಹಾಗೂ ಹುಚ್ಚಯ್ಯನ ಗಾಲಿಗಳಿಗೆ ಚಿಕ್ಕ ದೊಡ್ಡ ಬಟ್ಟಲುಗಳು ಮುಚ್ಚಳಗಳು ಇಲ್ಲವೆ ತಾಟುಗಳಂತಹ ಪರಿಕರ ಉಪಯೋಗಿಸುತ್ತಾರೆ. ಇವುಗಳನ್ನು ಬೋರಲು ಹಾಕಿ ಅದರ ಸುತ್ತಲೂ ಕಡ್ಡಿಯಿಂದ ಅಥವಾ ಅದಕ್ಕಾಗಿ ನಿರ್ಮಿಸಿಕೊಂಡ ಸಾಧನದಿಂದ ಸುಣ್ಣದ ಚುಕ್ಕೆಗಳನ್ನು ಇಡುತ್ತಾರೆ.

ಅದೇ ರೀತಿಯಲ್ಲಿ ಎಲೆಬಳ್ಳಿಗಾಗಿ ಗಿಡದ ಎಲೆಗಳು ಅಥವಾ ರಟ್ಟಿನಲ್ಲಿ ಕತ್ತರಿಸಿದ ಎಲೆಯ ಆಕಾರಗಳನ್ನು ಇಡುತ್ತಾರೆ. ಕೊಳಲಬಾವಿ ರಾಮನತೊಟ್ಟಿಲು ಮತ್ತು ತೇರು ಹುಚ್ಚಯ್ಯನನ್ನು ರಚಿಸಲು ದಾರ, ಕಡ್ಡಿಗಳನ್ನು ಬಳಸುತ್ತಾರೆ. ಇವುಗಳನ್ನು ಇಟ್ಟು ಅವುಗಳ ಎರಡೂ ಬದಿಯಲ್ಲೂ ಸುಣ್ಣದ ಚುಕ್ಕೆಗಳನ್ನು ಇಟ್ಟು ಚಿತ್ರ ಪೂರ್ಣಗೊಳಿಸುತ್ತಾರೆ.

ಪ್ರತಿಯೊಂದು ದಿನ ಆಯಾ ಮುಖ್ಯ ಚಿತ್ರಗಳಲ್ಲದೇ ಪೂರಕವಾಗಿ ಅವುಗಳ ಅಕ್ಕಪಕ್ಕ ಮೇಲೆ ಕೆಳಗೆ ಚಿಕ್ಕ ಪ್ರಮಾಣದ ಸೂರ್ಯಚಂದ್ರ, ಹಾವು, ಚೇಳು, ಏಣಿ, ಸ್ವಸ್ತಿಕ ಸುಳುವಿನ ನಕ್ಷೆಗಳನ್ನು ಬರೆಯುತ್ತಾರೆ. ಚಿತ್ರರಚನೆ ಪೂರ್ತಿಯಾದ ನಂತರ ಅದರ ಕೆಳಗಡೆಗೆ ಅಥವಾ ಮೇಲೆ ಇಲ್ಲವೆ ಚಿತ್ರದ ಮಧ್ಯ ಭಾಗದಲ್ಲಿ ಕುಂಕುಮ ಅರಿಷಿಣದ ಐದು ಬಟ್ಟುಗಳನ್ನು ಇಟ್ಟು ನಂತರ ಪೂಜಿಸುತ್ತಾರೆ. ಬಿಳಿಯಾದ ಬೆಳದಿಂಗಳ ಚಿತ್ರಗಳಲ್ಲಿ ಕೆಂಪುಹಳದಿ ವರ್ಣದ ಕುಂಕುಮ ಅರಿಷಿಣಗಳು ವರ್ಣವೈವಿಧ್ಯತೆಯಿಂದ ಸುಂದರವಾಗಿ ಕಂಗೊಳಿಸುತ್ತವೆ.

ಚಿತ್ರ ರಚಿಸುವ ರಚನಾ ಕ್ರಿಯೆಯಲ್ಲೂ ಕೆಲವರು ತಮ್ಮದೇ ಆದ ನಂಬಿಗೆಗಳನ್ನು ಹೊಂದಿದ್ದಾರೆ. ಪವಿತ್ರವಾದ ಬೆಳದಿಂಗಳನ್ನು ನೆಲದ ಮೇಲೆ ಕುಳಿತು ರಚಿಸಬಾರದು ಎಂದು ಕಟ್ಟಿಗೆಯ ಮಣೆಯ ಮೇಲೆ ಕುಳಿತು ರಚಿಸುತ್ತಾರೆ. ಮತ್ತೆ ಕೆಲವರು ಬೆಳದಿಂಗಳನ್ನು ಕುಳಿತು ರಚಿಸಲೇ ಬಾರದು ಎನ್ನುವ ನಂಬಿಕೆ ಹೊಂದಿದ್ದು ಅಂತಹವರು ನಿಂತುಕೊಂಡು ಗೋಡೆಯ ಮೇಲೆ ಬರೆಯುತ್ತಾರೆ.

ಬೆಳದಿಂಗಳು ರಚನಾ ವಿಧಿಯಲ್ಲಿ ಪ್ರಮುಖ ಅಂಶವೆಂದರೆ, ಶೀಗಿಚಿತ್ರ ಕಲೆಯಂತೆ ಇಲ್ಲಿಯೂ ಚಿತ್ರರಚನಾ ಸಂದರ್ಭದಲ್ಲಿ ಸಂಬಂಧಿಸಿದ ಚಿತ್ರವಿನ್ಯಾಸದ ಕುರಿತಾಗಿ ಹಾಡುಗಳನ್ನು ಹಾಡುತ್ತಾ ಚಿತ್ರ ಬರೆಯುವರು.

ಮೊದಲನೆಯ ದಿನ ಬರೆಯುವ ತಳುಕು ಬಟ್ಟಲನ್ನು ದುಂಡಾಗಿರುವ ಕಾರಣ ಕೆಲವರು ಚಂದ್ರನನ್ನು ಹೊಯ್ಯುವುದು ಎಂತಲೂ ಹೇಳುತ್ತಾರೆ. ದೊಡ್ಡ ಬಟ್ಟಲು ಸೂರ್ಯ ಮತ್ತು ಚಿಕ್ಕ ಬಟ್ಟಲು ಚಂದ್ರ ಎಂದು ಪರಿಗಣಿಸುತ್ತಾರೆ. ಚಂದ್ರನನ್ನು ಬರೆಯುವಾಗ

> ಒಂದೇ ಸೇರಕ್ಕಿ ತರುವೆ ನಮ್ಮ ಚಂದ್ರಾಮಗೆ
> ಒಂದೇ ಮಂಡ್ಲಾವ ಬರಿವೆ ||

ಎಂದು ಹಾಡಿದರೆ, ಸೂರ್ಯನ ಚಿತ್ರ ಬರೆಯುವಾಗ ಹೀಗೆ ಹಾಡುತ್ತಾರೆ.

> ಸೂರ್ಯಗೆ ಗುಡಿಕಟ್ಟಿ ಮ್ಯಾಗ ಬಾವಿ ತೋಡಿ
> ಮ್ಯಾಲೆ ಚಪ್ಪುರದ ಮರಮಾಡಿ || ಮಲ್ಲಯ್ಯ
>
> ಪಾದಕಗ್ಗುಣಿಯ ಯಿಡುದೇವು
> ಕೊಳಲಬಾವಿಯನ್ನು ಬರೆಯುವ ಎರಡನೆಯ ದಿನಲ್ಲಿ
> ಮುತ್ತುಕೊಟ್ಟು ತಗುಸ್ಯಾರೆ ಕಲ್ಲಬಾವಿ
> ಮುತ್ತಿನ ಸೋಪಾನದಡಿಗಲ್ಲು || ಬಾವ್ಯಾಗ

ಮುಕ್ಕಣ್ಣನೀಸ್ವರನ ಮಡುದೇರು || ಗಂಗಮ್ಮ ತಾಯಿ
ದಾಯನಾಡುತಲೆ ಬರುತೀನಿ

ಮೂರನೆಯ ದಿನ ಎಲೆ ಬಳ್ಳಿಯನ್ನು ಬರೆಯುವಾಗ ಈ ಕೆಳಗಿನಂತೆ ಹಾಡುತ್ತಾರೆ.

ಎಲೆಬಳ್ಳಿ ಸುಳಿಮ್ಯಾಲೆ ಕಾಲೆಂಗ ಇಡಲೆ
ನೀರೆಂಗ ತರಲೆ || ನೀರೆಂಗ ತರಲೆ
ಶಿವನ ಪೂಜೆಂಗ ಮಾಡಲೆ

ನಾಲ್ಕನೆಯದಿನ ಹುಚ್ಚಯ್ಯ ಐದನೆಯ ದಿನ ತೇರನ್ನು ಚಿತ್ರಿಸುವಾಗ ತೇರನ್ನು, ಜಾತ್ರೆಯನ್ನು ಕುರಿತ ಹಾಡುಗಳನ್ನು ಹಾಡುತ್ತಾರೆ. ಹುಚ್ಚಯ್ಯನು ಕೂಡಾ ಕಿರು ಪ್ರಮಾಣದ ತೇರು ಆಗಿರುವುದರಿಂದ ಅದನ್ನು ಚಿತ್ರಿಸುವಾಗಲೂ ತೇರಿನ ಹಾಡುಗಳನ್ನೇ ಹಾಡುವರು. ಇವುಗಳನ್ನು ರಚಿಸುವಾಗ

ತಿಂಗಳ ಮಾವನ ತೇರು ಅಂದದಿ ಎಳೆದಾರು
ಜಾಣ ಜಾಣೆಯರು ಕುಣಿದಾಡಿ | ಜಾಣ ಜಾಣೆಯರು ಕುಣಿದಾಡಿ
ಭಕುತೀಲಿ ಶಿವನ ಒಲುಮೆಯ ಪಡೆದಾರು ||

ಎಂಬುದಾಗಿ ಹಾಡುತ್ತಾರೆ. ಹೀಗೆ ಬೆಳದಿಂಗಳ ರಚನಾ ವಿಧಾನ ತನ್ನದೇ ಆದ ವಿಶಿಷ್ಟತೆಯನ್ನು ಉಳಿಸಿಕೊಂಡಿದೆ.

೫. ವಸ್ತು ವಿಷಯಗಳು

ಬೆಳದಿಂಗಳ ಹೊಯ್ಯುವ ಆಚರಣೆಯಲ್ಲಿ ಐದು ದಿನಗಳೂ ಪ್ರತಿದಿನ ಬೇರೆ ಬೇರೆ ವಸ್ತು ವಿಷಯಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಬರೆಯುತ್ತಾರೆ. ಅವುಗಳನ್ನು ಸ್ಥೂಲವಾಗಿ ಈ ಕೆಳಗಿನಂತೆ ಹೇಳಬಹುದು.

ಮೊದಲನೆಯ ದಿನ : ಮೊದಲನೆಯ ದಿನ ತಳುಕು ಬಟ್ಟಲು ಚಿತ್ರಿಸುವರು. ಇದನ್ನು ಕೆಲವು ಸೂರ್ಯಚಂದ್ರ ಅಥವಾ ಗಂಗಾಳ ಬಟ್ಟಲು ಎಂತಲೂ ಕರೆಯುವರು. ಈ ಮುಖ್ಯ ಚಿತ್ರಗಳ ಬದಿಗೆ ಹಾವು, ಚೇಳುಗಳನ್ನೂ ಚಿಕ್ಕ ಪ್ರಮಾಣದಲ್ಲಿ ಚಿತ್ರಿಸುತ್ತಾರೆ. ಸೂರ್ಯಚಂದ್ರ ಇಬ್ಬರೂ ಬೆಳಕು ನೀಡುವವರು ಸೂರ್ಯ ಹೋದ ಮೇಲೆ ಚಂದ್ರನ ಬೆಳಕು ಆಸರೆಯಾಗುತ್ತದೆ. ಹಾಗಾಗಿ ಬಿಸಿಲಿನ ಚೇತನ ಶುಭ್ರಬೆಳದಿಂಗಳಿನ ಸಂತೋಷಕ್ಕಾಗಿ ಈ ಇಬ್ಬರ ಚಿತ್ರಗಳನ್ನೂ ಬರೆಯುತ್ತಾರೆ.

ಎರಡನೆಯ ದಿನ : ಎರಡನೆಯ ದಿನ ಕೊಳಲ ಬಾವಿ ಇಲ್ಲವೆ ರಾಮನ ತೊಟ್ಟಿಲು ಚಿತ್ರಿಸುತ್ತಾರೆ. ಮನುಷ್ಯನ ನೀರಿನ ಅವಶ್ಯಕತೆಯನ್ನು ಕೊಳಲ ಬಾವಿಯ ಮೂಲಕ ಅಭಿವ್ಯಕ್ತಿಸಿದರೆ, ರಾಮನ ತೊಟ್ಟಿಲು ಸಂತಾನ ಭಾಗ್ಯದ ಆಶಯವನ್ನು ಪ್ರತಿಬಿಂಬಿಸುತ್ತದೆ.

ಮೂರನೆಯ ದಿನ : ಮೂರನೆಯ ದಿನ ಎಲೆ ಬಳ್ಳಿಯ ಚಿತ್ರವನ್ನೂ ಬಿಡಿಸುವರು. ಪ್ರಕೃತಿಯ ಸಸ್ಯ ಸಂಪತ್ತು, ಅದನ್ನು ಅನುಸರಿಸಿ ಬೆಳೆದ ಮಾನವನ ಬದುಕು, ಪ್ರಕೃತಿಯನ್ನು ಉಳಿಸಿಕೊಳ್ಳುವ ಜನಪದರ ಕಾಳಜಿಗಳು ಈ ಎಲೆಬಳಿಯ ಚಿತ್ರದ ಮುಖಾಂತರ ಕಂಡುಬರುತ್ತವೆ.

ನಾಲ್ಕನೆಯ ದಿನ : ನಾಲ್ಕನೆಯ ದಿನ ಹುಚ್ಚಯ್ಯನನ್ನು ಚಿತ್ರಿಸುತ್ತಾರೆ. ಯಾವುದೇ ಜಾತ್ರೆಯಲ್ಲಿಯೂ ಸಾಮಾನ್ಯವಾಗಿ ತೇರಿನ ಮುಂಚಿನ ದಿನ ಹುಚ್ಚಯ್ಯನನ್ನು ಎಳೆಯುತ್ತಾರೆ. ಇದನ್ನು ಚಿಕ್ಕ ರಥೋತ್ಸವದ ಮಾದರಿಯಲ್ಲಿಯೇ ಪರಿಗಣಿಸುವರು. ಹಾಗಾಗಿ ಮರುದಿನದ ಹುಣ್ಣಿಮೆಯಲ್ಲಿ ಬಿಡಿಸುವ ತೇರಿನ ಚಿತ್ರಕ್ಕೆ ಪೂರ್ವಭಾವಿಯಾಗಿ ಈ ಹುಚ್ಚಯ್ಯನ ಚಿತ್ರ ರಚಿಸುತ್ತಾರೆ.

ಐದನೆಯ ದಿನ : ಐದನೆಯ ದಿನ ಹಗಲು ಹೊತ್ತಿನಲ್ಲಿ ಬೆಳದಿಂಗಳು ಚಿತ್ರ ಬಿಡಿಸುತ್ತಾರೆ. ಅಂದು ಹುಣ್ಣಿಮೆಯಾಗಿದ್ದು ತೇರಿನ ಚಿತ್ರ ಬರೆಯುತ್ತಾರೆ. ಕೆಲವರು ಸುಣ್ಣದಿಂದ ಚಿತ್ರಿಸಿದರೆ, ಮತ್ತೆ ಕೆಲವರು ಕೆಮ್ಮಣ್ಣಿನಿಂದ ಸುಣ್ಣದ ಗೋಡೆಯ ಮೇಲೆ ಚಿತ್ರಿಸುವರು. ಕೆಲವು ಕಡೆಗಳಲ್ಲಿ ಹೆಣ್ಣು ಮಕ್ಕಳು ಗಂಡಸರ ಸಹಾಯದಿಂದ ಆಳೆತ್ತರದ ತೇರನ್ನು ಬರೆಯುವರು. ಈ ತೇರಿನ ಪಕ್ಕದಲ್ಲಿ ಪಕ್ಷಿಗಳು, ಸೂರ್ಯ, ಚಂದ್ರ, ನಕ್ಷತ್ರ, ಈಶ್ವರ, ಹಾವು, ಚೇಳು, ವಾದ್ಯಮೇಳದವರು ಮುಂತಾದ ಚಿತ್ರಗಳನ್ನು ಚಿಕ್ಕ ಪ್ರಮಾಣದಲ್ಲಿ ಬಿಡಿಸುತ್ತಾರೆ.

ಐದನೆಯ ದಿನದ ಈ ತೇರಿನ ಚಿತ್ರದಲ್ಲಿ ಹಲವಾರು ವೈವಿಧ್ಯತೆ, ಭವ್ಯತೆಗಳನ್ನು ಕಾಣಬಹುದು. ಈ ವೈವಿಧ್ಯತೆ ಪ್ರಾದೇಶಿಕವಾಗಿಯೂ, ವೈಯುಕ್ತಿಕವಾಗಿಯೂ ಇರುತ್ತದೆ. ಹೀಗಿದ್ದರೂ ಚಿತ್ರದ ವಸ್ತು, ಬಳಸುವ ಸಂಕೇತ, ಪೂಜೆಯ ವಿಧಾನ ಒಂದೇ ಆಗಿರುತ್ತದೆ. ಹೀಗೆ ತೆಗೆದ ಚಿತ್ರಗಳನ್ನು ನೋಡಲು ಜನರು ಮನೆ ಮನೆಗೆ, ಓಣಿಗಳಿಗೆ ಹೋಗುತ್ತಾರೆ. ಇವು ೨ ರಿಂದ ೩ ತಿಂಗಳು ಹಾಗೆ ಉಳಿದು ಕೊಂಡಿರುತ್ತವೆ.

ಈ ರೀತಿಯ ಪ್ರತಿಯೊಂದು ದಿನದ ಚಿತ್ರಗಳಲ್ಲಿ ಪ್ರಾದೇಶಿಕ ಭಿನ್ನತೆಗಳಿರುತ್ತವೆ. ಮೊದಲದಿನ ಉತ್ತರಕರ್ನಾಟಕದಲ್ಲಿ ತಳುಕು ಬಟ್ಟಲು ಬಿಡಿಸಿದರೆ, ದಕ್ಷಿಣ ಕರ್ನಾಟಕದಲ್ಲಿ ಚವತಿ ಚಂದ್ರ ಇಲ್ಲವೆ ಪಂಚಮಿ ಚಂದ್ರನನ್ನು ಚಿತ್ರಿಸಿ ಅದರ ಸುತ್ತಲೂ ನಕ್ಷತ್ರ ಚಿತ್ರಿಸುವರು. ಈ ಚಂದ್ರನ ಚಿತ್ರವನ್ನು ಚೌಕಾದ ವಿನ್ಯಾಸದಲ್ಲಿ ಚಿತ್ರಿಸುತ್ತಾರೆ.

ಉತ್ತರ ಕರ್ನಾಟಕದಲ್ಲಿ ಎರಡನೇ ದಿನ ಕೊಳಲ ಬಾವಿ, ರಾಮನ ತೊಟ್ಟಿಲು ಬಿಡಿಸಿದರೆ ದಕ್ಷಿಣ ಕರ್ನಾಟಕದಲ್ಲಿ ಎಲೆ ಬಳ್ಳಿ ಅಥವಾ ಎಲೆ ತೊಂಡಲವನ್ನು ಚಿತ್ರಿಸುವರು. ಹಾಗೆ ನಾಲ್ಕನೆ ದಿನ ಇಲ್ಲಿ ಉತ್ಸವದ ಚಿತ್ರ ರಚಿಸುತ್ತಾರೆ. ಐದನೆ ದಿನ ಮಾತ್ರ ಸಾಮಾನ್ಯವಾಗಿ ಎಲ್ಲ ಕಡೆಗೂ ತೇರಿನ ಚಿತ್ರ ಇರುತ್ತದೆ.

ಈ ಎಲ್ಲ ಚಿತ್ರಗಳ ಜೊತೆಗೆ ಪೂರಕವಾಗಿ ರಚಿಸುವ ಕಿರುಚಿತ್ರಗಳೂ ಪ್ರಾದೇಶಿಕ ಭಿನ್ನತೆ ಯಿಂದ ಕೂಡಿರುತ್ತವೆ. ಇವುಗಳಲ್ಲಿ ಸೂರ್ಯ ಚಂದ್ರ, ನಕ್ಷತ್ರ, ಸ್ವಸ್ತಿಕ, ಅಳಿಲು, ಏಣಿ, ಕಳಸ, ತಂಬಿಗೆ, ಸುಳುವಿನ ನಕ್ಷೆ, ವಾದ್ಯದವರು, ಚಾಮರಧಾರಿಗಳು, ಪಾಲಕಿ ಹೊತ್ತವರು, ಗಿಳಿಗಳನ್ನು ಮುಂತಾಗಿ ಚಿತ್ರಿಸುವರು.

ಬೆಳದಿಂಗಳು ಹೊಯ್ಯುವ ಈ ಚಿತ್ರ ವಿನ್ಯಾಸಗಳು ಜನಪದರ ಬದುಕಿನ ವಿವಿಧ ಘಟ್ಟ ಗಳನ್ನು ಪ್ರತಿನಿಧಿಸುವಂತೆಯೇ ಅವರ ನಂಬಿಕೆ, ಆಚರಣೆ, ಆಶಯ ಪ್ರತೀಕ್ಷೆಗಳನ್ನು ಬಿಂಬಿ ಸುತ್ತವೆ. ಜನಪದರು ಆಡುಮಾತಿನಲ್ಲಿ ಹೇಳುವಂತೆ 'ಕಾರಹುಣ್ಣಿಮೆಯು ಹಬ್ಬಗಳನ್ನು ಕರೆದರೆ ಭಾರತ ಹುಣ್ಣಿಮೆಯು ಹಬ್ಬಗಳನ್ನು ಬರಮಾಡಿಕೊಳ್ಳುತ್ತದೆ' ಎನ್ನುತ್ತಾರೆ. ಹಾಗಾಗಿ ಮುಂದೆ ಬರುವ ಹಬ್ಬ ಹುಣ್ಣಿಮೆಗಳಿಗೆ, ರಥೋತ್ಸವಗಳಿಗೆ ಈ ಚಿತ್ರ ವಿನ್ಯಾಸಗಳು ಮಾದರಿ ರೂಪದಲ್ಲಿವೆ ಎನ್ನಬಹುದಾಗಿದೆ.

೬. ನಂಬಿಕೆಗಳು

ಬೆಳದಿಂಗಳಪ್ಪನ ಪೂಜೆ, ಬೆಳದಿಂಗಳು ಹೊಯ್ಯುವುದು ಅಥವಾ ಚಂದ್ರನ ಆರಾಧನೆಯ ಹಿಂದೆ ಅನೇಕ ನಂಬಿಕೆಗಳು ಚಂದ್ರನ ಸುತ್ತ ಹೆಣೆದುಕೊಂಡಿವೆ. ಚಂದ್ರನ ವೃದ್ಧಿ ಷಯಗಳಿಗೆ ಆತನ ಪೂರ್ಣರೂಪಗಳಿಗೆ ಬೇರೆಯದೇ ಆದ ನಂಬಿಕೆಗಳಿವೆ. ಆಕಾಶದಲ್ಲಿರುವ ಚಂದ್ರ ವೃದ್ಧಿ ಷಯಗಳಿಂದ ಕೂಡಿದ್ದರೆ, ಶಿವನ ಬಳಿಯಿರುವ ಚಂದ್ರನು ವೃದ್ಧಿ ಷಯಗಳಿಂದ ಮುಕ್ತ ನಾಗಿದ್ದಾನೆ.

ಜೀವವುಳ್ಳ ಎಲ್ಲ ವಸ್ತುಗಳ ಮೇಲೆ ಹುಟ್ಟಿನಿಂದ ಸಾವಿನವರೆಗೆ ಚಂದ್ರ ತನ್ನ ಪ್ರಭಾವ ಬೀರುತ್ತಾನೆ. ಮನುಷ್ಯನ ಉತ್ಸಾಹ ಜಡತನಗಳಿಗೆ ಚಂದ್ರನ ವೃದ್ಧಿ ಷಯಗಳೇ ಕಾರಣ. ಚಂದ್ರನು ಸ್ವರ್ಗಕ್ಕೆ ದ್ವಾರ. ಅವನಿಂದಲೇ ಮಳೆ ಬರುತ್ತದೆ. ಜೀವಿಗಳ ಬೆಳವಣಿಗೆಯನ್ನು ಪ್ರಚೋದಿಸಲು ಶಕ್ತಿ ಪ್ರಸರಣ ಮಾಡುತ್ತಾರೆ. ಚಂದ್ರನ ಸುತ್ತ ಗೂಡುಕಟ್ಟಿದರೆ ಮಳೆಯಾಗು ವುದಿಲ್ಲ. ಬೆಳ್ಳಿಯು ಚಂದ್ರನ ಲೋಹವಾಗಿದೆ. ಗಾಜಿನ ಮೂಲಕ ಇಲ್ಲವೆ ಮರದ ಕೊಂಬೆಗಳ ಮೂಲಕ ಚಂದ್ರನನ್ನು ನೋಡಿದರೆ ಅದೃಷ್ಟ ಕೈಗೂಡುವುದಿಲ್ಲ.

ಚಂದ್ರನ ವೃದ್ಧಿ ಸಮಯದಲ್ಲಿ ತಮ್ಮ ಬಳಿಯಿರುವ ಹಣವನ್ನು ಆತನಿಗೆ ತೋರಿಸಿದರೆ, ಅವನಂತೆ ಅದು ವೃದ್ಧಿಸುತ್ತದೆ. ಬೆಳದಿಂಗಳಲ್ಲಿ ಬೇಟೆಯಾಡಿದರೆ ಬೇಟೆಯಾಡಿದ ಪ್ರಾಣಿಯ

ಮಾಂಸ ಹೆಚ್ಚುತ್ತದೆ. ಚಂದ್ರನ ವೃದ್ಧಿಸುವ ದಿನಗಳ ಬೆಳದಿಂಗಳಲ್ಲಿ ಬಿತ್ತಿದರೆ ಫಸಲು ಸಮೃದ್ಧವಾಗುತ್ತದೆ.[೮]

ರೊಟ್ಟಿಯ ಹಾಗೆ ದುಂಡಾಗಿರುವ ಚಂದ್ರ ಮತ್ತು ರೊಟ್ಟಿಯ ಸಂಬಂಧಗಳು ಸಹಿತ ಜನಪದರಲ್ಲಿ ವ್ಯಾಪಕವಾಗಿ ಹರಡಿಕೊಂಡಿವೆ. ಪ್ರಾಚೀನ ಇಟಲಿಯ ಚಂದ್ರದೇವತೆಯ ಹಬ್ಬದಲ್ಲಿ ಆಡಿನಮರಿ ಮತ್ತು ರೊಟ್ಟಿಯನ್ನು ಅರ್ಪಿಸುತ್ತಿದ್ದರು. ಈಜಿಪ್ತಿನ ಜನರು ವರ್ಷಕ್ಕೊಮ್ಮೆ ಚಂದ್ರನಿಗೆ ರೊಟ್ಟಿಯನ್ನು ನೈವೇದ್ಯ ಮಾಡುತ್ತಾರೆ. ಅಲ್ಲದೇ ನಮ್ಮ ವೇದ ಬ್ರಾಹ್ಮಣಗಳಲ್ಲಿ ಹುಣ್ಣಿಮೆ ಚಂದ್ರನಿಗೆ ರೊಟ್ಟಿಯನ್ನು ಅರ್ಪಿಸುತ್ತಿದ್ದ ಮಾಹಿತಿಗಳಿವೆ.[೯]

ಇಂತಹ ನಂಬಿಕೆಗಳಲ್ಲದೇ ಉತ್ತರ ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ಚಂದ್ರನ ಆರಾಧನೆಯ ಕುರಿತು ನಂಬಿಕೆಗಳಿವೆ ಅವುಗಳಲ್ಲಿ ಕೆಲವು ಹೀಗಿವೆ.[೧೦]

೧. ಭಾರತ ಹುಣ್ಣಿಮೆಗೆ ಉಳವಿ ಬಸವಣ್ಣನ ಜಾತ್ರೆ ನಡೆಯುತ್ತದೆ. ಆ ಜಾತ್ರೆಯ ಹಿಂದಿನ ನಾಲ್ಕು ದಿನಗಳಲ್ಲಿ ಸಣ್ಣ ತೇರು ಎಳೆಯುವರು. ಅದರ ನೆನಪಿನ ನಿಮಿತ್ತ ಈ ಚಿತ್ರಗಳನ್ನು ತೆಗೆದು ಪೂಜೆಮಾಡುತ್ತಾರೆ.

೨. ಭಾರತ ಹುಣ್ಣಿಮೆಗೆ ಬೀಳುವ ಶುಭ್ರವಾದ ಬೆಳದಿಂಗಳು ಇನ್ನಾವ ಹುಣ್ಣಿಮೆಯಲ್ಲೂ ಬೀಳಲಾರದು. ಆ ಬೆಳದಿಂಗಳಲ್ಲಿ ಸಂತೋಷವಾಗಿ ಕಾಲ ಕಳೆಯಲು ಹೀಗೆ ಚಂದ್ರನ ಚಿತ್ರ ಬರೆಯುತ್ತಾರೆ.

೩. ರೈತರ ಜೀವನವೆಲ್ಲ ಬಸವಣ್ಣನನ್ನು ಅವಲಂಬಿಸಿ ಇರುವುದರಿಂದ ಅವನ ಜಾತ್ರೆಯಲ್ಲಿ ಪೂಜೆಮಾಡಿ ಸಂತೋಷ ಪಡುತ್ತಾರೆ.

೪. ಹೊಸ್ತಿಲ ತನಕವೂ ಚಂದ್ರನ ಬೆಳಕು ಈ ಐದೂ ದಿನಗಳಲ್ಲಿ ಬೀಳುತ್ತದೆ. ಅದಕ್ಕಾಗಿ ಈ ಚಿತ್ರ ಬರೆಯುತ್ತಾರೆ.

೫. ಚಂದ್ರನ ಪೂಜೆ ಮಾಡುವುದರಿಂದ ಎಲ್ಲ ರೀತಿಯಿಂದಲೂ ಶುಭವಾಗುತ್ತದೆ.

೬. ಮದುವೆಯಾಗದ ಹುಡುಗಿಯರು ಬೆಳದಿಂಗಳು ಬರೆದರೆ ಅವರಿಗೆ ಕಂಕಣಬಲ ಕೂಡಿಬರುತ್ತದೆ. ಮದುವೆಯಾದವರು ಮಾಡಿದರೆ ದಾಂಪತ್ಯ ಸುಖ ಸಿಗುತ್ತದೆ.

೭. ಗರ್ಭಿಣಿಯರು ತೇರಿನ ಚಿತ್ರ ಬಿಡಿಸಿದರೆ ಬಯಸಿದ ಮಕ್ಕಳು ಹುಟ್ಟುತ್ತವೆ.

೮. ಮಕ್ಕಳಾಗದವರು ವ್ರತಹಿಡಿದು ಈ ಹುಣ್ಣಿಮೆಯಲ್ಲಿ ಬೆಳದಿಂಗಳ ಚಿತ್ರ ಬಿಡಿಸಿದರೆ, ಮಕ್ಕಳ ಭಾಗ್ಯ ದೊರಕುತ್ತದೆ.

೯. ಚಂದ್ರನನ್ನು ಪೂಜಿಸುವುದರಿಂದ ರೋಗಗಳು ವಾಸಿಯಾಗುತ್ತವೆ.

ಇಂತಹ ನಂಬಿಕೆ ಮತ್ತು ಹಿನ್ನೆಲೆಗಳ ಮೂಲಕ ಬೆಳದಿಂಗಳ ಹೊಯ್ಯುವುದು ಮತ್ತು ಪೂಜಿಸುವಂತಹ ಚಂದ್ರನ ಕುರಿತಾದ ಆಚರಣೆಗಳು ನಾಡಿನಲ್ಲಿ ಶ್ರೀಮಂತವಾಗಿ ಬೆಳೆದು ಬಂದಿವೆ.

೭. ಸಮಾರೋಪ

ಬೆಳದಿಂಗಳ ಚಿತ್ರಕಲೆಯು ಅಪ್ಪಟ ಧಾರ್ಮಿಕ ಹಿನ್ನೆಲೆಯಿಂದ ಬೆಳೆದು ಬಂದುದಾಗಿದೆ. ಇದು ಒಂದು ಸಮುದಾಯದ ಸಮಷ್ಠಿಯ ಸೃಷ್ಠಿ. ಅಷ್ಟೇ ಅಲ್ಲ ಜನಸಾಮಾನ್ಯರ ಶೃತಿ ಮತ್ತು ಸ್ಮೃತಿಯೂ ಅಹುದು. ಅಲ್ಲದೇ ಮನುಷ್ಯನ ಸಾಂಸ್ಕೃತಿಕ ಚರಿತ್ರೆಗೂ ಜನಪದ ಕಲೆಗಳ ಉಗ ಮಕ್ಕೂ ಅವಿನಾಭಾವ ಸಂಬಂಧವಿದೆ ಎಂಬಂತಹ ಸಂಗತಿಗಳು ಇಂತಹ ಅಧ್ಯಯನಗಳಿಂದ ತಿಳಿದುಬರುತ್ತವೆ.

ಧರ್ಮ, ದೇವರು, ಆರಾಧನೆ, ಆಚರಣೆಯಂತಹ ಪ್ರಕ್ರಿಯೆಗಳು ಕಲಾ ಜಗತ್ತಿನ ಮೇಲೆ ಬೀರಿರುವ ಪ್ರಭಾವಗಳು. ಆ ಮೂಲಕ ಜನಪದ ಕಲೆಗಳು ವಿಕಸನ ಹೊಂದಿ ಪರಂಪರೆಯಾಗಿ ಬೆಳೆದುಬಂದಂತಹ ಸಂಗತಿಗಳು ಬೆಳದಿಂಗಳ ಚಿತ್ರಕಲೆಯ ಅಧ್ಯಯನದಿಂದ ತಿಳಿದು ಬರುತ್ತವೆ.

ಬೆಳದಿಂಗಳು ಪೂಜೆಯಂತಹ ಆಚರಣೆಯಿಂದ ನಮ್ಮ ಪ್ರಾಚೀನ ಭವ್ಯ ಪರಂಪರೆಯೊಂದು ಗೋಚರಿಸುವಂತೆಯೇ ಆ ಮೂಲಕ ಚಿತ್ರಕಲೆ, ಆರಾಧನಾ ಕ್ರಮ, ಜನಪದ ಹಾಡುಗಳಂತಹ ಬಹುಕೃತ ಪ್ರಾಚೀನ ವಿಷಯಗಳು ಅನಾವರಣಗೊಳ್ಳುತ್ತವೆ.

ಬೆಳದಿಂಗಳ ಚಿತ್ರಕಲೆಯ ಆಚರಣೆಯು ಈ ನೆಲದ ಮೂಲ ಸಂವೇದನೆಗಳಿಗೆ ತೀರ ಹತ್ತಿರವಾಗಿದೆ. ಇದು ಜನರ ಬದುಕಿನಷ್ಟೇ ವೈವಿಧ್ಯಪೂರ್ಣ, ವರ್ಣಮಯವಾಗಿದೆ. ಜನಪದರು ತಮ್ಮ ಅನುಭವಗಳಿಗೆ ಜೀವ ಕೊಟ್ಟಿದ್ದು ಇಂತಹ ಕಲೆಗಳ ಮೂಲಕವೆ. ಹಾಗಾಗಿ ಈ ಕಲೆಯಲ್ಲಿ ಆಯಾ ಜನರ ವೈವಿಧ್ಯ ಕಲಾಪರಂಪರೆ, ಹೃದಯ ಶ್ರೀಮಂತಿಕೆ ಹಾಗೂ ಸಂಸ್ಕಾರ ವಂತಿಕೆಗಳನ್ನು ಗುರುತಿಸಬಹುದಾಗಿದೆ.

ಈ ಚಿತ್ರಕಲಾಪ್ರಕಾರವು ಜನಾಂಗಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ ವಿಶಿಷ್ಟವಾದ ಅಂಶಗಳನ್ನು ತನ್ನಲ್ಲಿ ಅಡಗಿಸಿಕೊಂಡು ವೈವಿಧ್ಯತೆಯಿಂದ ಶ್ರೀಮಂತವಾಗಿದೆ.

ಸಾಮಾನ್ಯವಾಗಿ ನಮ್ಮ ಹೆಚ್ಚಿನ ಜನಪದ ಕಲಾಪ್ರಕಾರಗಳಂತೆಯೇ ಬೆಳದಿಂಗಳ ಚಿತ್ರಕಲಾ ಆಚರಣೆಯೂ ನಶಿಸಿ ಹೋಗುತ್ತಿದೆ. ಅದನ್ನು ಉಳಿಸಿ ಬೆಳೆಸುವುದು, ವಿವಿಧ ಕ್ರಮಗಳನ್ನು ಅನುಸರಿಸಿ ಕಾಯ್ದಿಡುವುದು ಬೇರೆ ಬೇರೆ ದೃಷ್ಠಿಕೋನಗಳಿಂದ ಬಹುಶಿಸ್ತೀಯ ಅಧ್ಯಯನಕ್ಕೊಳಪಡಿಸುವಂತಹ ಕ್ರಮಗಳು ಹೆಚ್ಚಾಗಬೇಕು. ಅಲ್ಲದೆ ಅಲ್ಲಿನ ಚಿತ್ರವಿನ್ಯಾಸಗಳನ್ನು ದಾಖಲಿಸುವುದು ಅವುಗಳಿಗೆ ಕಲಾಹಿನ್ನೆಲೆಯಲ್ಲಿ ಪರಿಪ್ರೇಕ್ಷವನ್ನು ಕಟ್ಟಿಕೊಡುವ ಪ್ರಯತ್ನಗಳು ನಡೆಯಬೇಕಿದೆ.

ಗ್ರಂಥ ಋಣ

೧. ಬೆಳ್ದಿಂಗ್ಳಪ್ಪನ ಪೂಜೆ - ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨. ಕರ್ನಾಟಕದ ಜನಪದ ಚಿತ್ರಕಲೆ - ಡಾ.ಎಸ್.ಸಿ.ಪಾಟೀಲ, ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಮಠ, ಗದಗ.

೩. ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ - ಡಾ.ಯಾದಪ್ಪ ಪರದೇಶಿ, ಹಂಪಿ ಕನ್ನಡ ವಿ.ವಿ.ಗೆ ಸಲ್ಲಿಸಿದ (ಅಪ್ರಕಟಿತ) ಪಿಎಚ್.ಡಿ. ಪ್ರಬಂಧ.

೪. ಹಚ್ಚೆ: ಒಂದು ಜನಪದಕಲೆ - ಡಾ.ಎಚ್.ಎಂ.ಮಹೇಶ್ವರಯ್ಯ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೫. ಭಾರತೀಯ ಸಂಸ್ಕೃತಿ -ಎಸ್.ಶ್ರೀಕಂಠಶಾಸ್ತ್ರಿ, ಪ್ರಸಾರಾಂಗ, ಮೈಸೂರು ವಿವಿ. ಮೈಸೂರು.

೬. ಭಾರತೀಯ ಹಬ್ಬಗಳು - ಸಿ.ವಿ ಕೆರಿಮನಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ನಾಗರಿಕತೆಯ ಹೊಸ್ತಿಲಲ್ಲಿ - ಶಿವರಾಮ ಕಾರಂತ, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು.

೮. ಜನಪದ ಆರಾಧನೆ ಮತ್ತು ಕಲೆ - ಡಾ.ಸುಶೀಲ ಪಿ. ಉಪಾಧ್ಯಾಯ, ಪ್ರಾದೇಶಿಕ ಜನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

೯. ಜನಪದ ಕೆಲವು ಮುಖಗಳು - ಡಾ.ಜೀ.ಶಂ.ಪರಮಶಿವಯ್ಯ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

೧೦. ಭಾರತದ ಹಬ್ಬ ಹರಿದಿನಗಳು - ಪ್ರೊ.ಡಿ.ಟಿ.ರಂಗಸ್ವಾಮಿ, ಸಮಾಜ ಪುಸ್ತಕಾಲಯ, ಧಾರವಾಡ.



ಆನಂದ ಕೆ. ಪೂಜಾರರವರು ಬಾದಾಮಿಯ ಕಾಳಿದಾಸ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ೧೯೫೫ರಲ್ಲಿ ಜನಿಸಿದ ಇವರು ಸಂಖ್ಯಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮತ್ತು ಸ್ನಾತಕೋತ್ತರ ಕಲಾ ಇತಿಹಾಸ, ಸ್ನಾತಕ ಶಿಕ್ಷಣಗಳಲ್ಲಿ ಪದವಿಗಳನ್ನು ಪಡೆದಿದ್ದು 'ಐತಿಹಾಸಿಕ ಬಾದಾಮಿಯ ಪರಿಚಯ' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. 'ಸಮನ್ವಯ' 'ಕಂಕಣ', 'ಬನಶಂಕರಿ ಜಾತ್ರೆ', 'ಚಾಲುಕ್ಯರ ಸಾಂಸ್ಕೃತಿಕ ಪರಂಪರೆ' ಎಂಬ ಗ್ರಂಥಗಳಿಗೆ ಸಹ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಕಲೆಯ ಕಡೆಗೆ ವಿಶೇಷ ಆಸಕ್ತಿ ಹೊಂದಿದ ಇವರು ಡಾ. ಎಸ್.ಸಿ.ಪಾಟೀಲರವರೊಂದಿಗೆ ಬಾದಾಮಿ ಪರಿಸರದ ಪ್ರಾಗೈತಿಹಾಸಿಕ ಚಿತ್ರಕಲೆಯ ಅನೇಕ ನೆಲೆಗಳನ್ನು ಹೊಸದಾಗಿ ಶೋಧಿಸಿದ್ದಾರೆ. ಕಲೆ, ಸಾಹಿತ್ಯ, ಇತಿಹಾಸ ಮತ್ತು ವ್ಯಕ್ತಿ ಪರಿಚಯಗಳ ಕುರಿತು ಅನೇಕ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಹಲವಾರು ಚಿತ್ರಕಲಾ ಪ್ರದರ್ಶನ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ. ಅನೇಕ ಸಂಘ, ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವುದರೊಂದಿಗೆ ಸಾಂಸ್ಕೃತಿಕ ಮುಖೇನ ಸಾರ್ವತ್ರಿಕವಾಗಿ ಗುರುತಿಸಲ್ಪಟ್ಟಿದ್ದಾರೆ. ಪ್ರಸ್ತುತ ಕರಾವಳಿ ಕರ್ನಾಟಕದ 'ಕಾವಿ ಚಿತ್ರಕಲೆ' ಕುರಿತು ಸಂಶೋಧನಾ ಅಧ್ಯಯನವನ್ನು ಡಾ. ಎಸ್.ಸಿ.ಪಾಟೀಲರವರ ಮಾರ್ಗದರ್ಶನದಲ್ಲಿ ಮಾಡುತ್ತಿದ್ದಾರೆ. ಅವರು ಲಲಿತಕಲಾ ಅಕಾಡೆಮಿಗಾಗಿ ಸಂಶೋಧನಾತ್ಮಕ 'ಬೆಳದಿಂಗಳ ಚಿತ್ರಕಲೆ' ಕುರಿತು ಗ್ರಂಥವನ್ನು ಸಿದ್ಧಪಡಿಸಿಕೊಟ್ಟಿದ್ದಕ್ಕಾಗಿ ಅಕಾಡೆಮಿ ಅವರನ್ನು ಅಭಿನಂದಿಸುತ್ತದೆ.

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - 560 002